ಗ್ರೀಷ್ಮ ಗಾಯನ

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೪೫ - ೨೦೨೩






## ಸಮರ್ಪಣಾ ಸಂಚಿಕೆ

KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮ ಬೃಂದಾವನ

# ಪರಿವಿಡಿ


ಅಧ್ಯಕ್ಷರ ಅಪೂರ್ವ ಅಂಕಣ..................................೪

ತಾಳ್ಮೆ..................................................................೭

ಹಿನ್ನೋಟ.............................................................೮

ಕವಿ-ಚಿತ್ರಣ......................................................೧೪

ವಕ್ತಿ-ಶಕ್ತಿ..........................................................೧೭

ಸಣ್ಣ ಕತೆ...........................................................೨೩

ಕವನಗಳು..........................................................೩೨

ಪ್ರವಾಸ ಕಥನ.....................................................೩೬

ಅರೋಗ್ಯ...........................................................೩೮

ಪ್ರಕೃತಿ...............................................................೪೦

ಚಿಣ್ಣರ ಮುತ್ತುಗಳು.............................................೪೬

# ಸಂಪಾದಕೀಯ

ಹೊಸ ಸರ್ಕಾರದ ಹೊಸ ಸವಾಲುಗಳು !!

ಗ್ರೀಷ್ಮ ಋತುವಿನಲ್ಲಿ ಬೃಂದಾವನದ ಗ್ರೀಷ್ಮ ಗಾಯನ !! ಸಂಭ್ರಮದ ವಸಂತೋತ್ಸವದ ಕಾರ್ಯಕ್ರಮದಲ್ಲಿ ನಮ್ಮೆಲ್ಲರ ಅಚ್ಚು ಮೆಚ್ಚಿನ ಕವಿ ಶ್ರೀ ಬಿ ರ್ ಲಕ್ಷ್ಮಣ್ ರಾವ್ ಅವರ "ಸುಬ್ಬಾ ಭಟ್ಟರ ಮಗಳೇ" ಗೀತೆಗಳು ಋತು ಸಂಮೋಹನದ ಗಾನ ವಾದರೆ, ಅದೇ ಕಾರ್ಯಕ್ರಮದಲ್ಲಿ ಸುಂದರ್ - ವಶಿಷ್ಟ ಅವರ ಸಾಮಾಜಿಕ ನಗೆ ನಾಟಕ " ಲೈಫು ಇಷ್ಟೇನೆ " ಎಲ್ಲರನ್ನು ನಗೆಗಡಲಲ್ಲಿ ತೇಲಿಸಿತು.

ಮತ್ತೊಂದು ಸುಂದರ ಸಂಜೆಯಲ್ಲಿ ಬಿ ರ್ ಲಕ್ಷ್ಮಣ್ ರಾವ್ ಅವರೊಡನೆ "ಸುಬ್ಬಾ ಭಟ್ಟರ ಮಗಳೇ" ಕವಿ - ಗಾಯನ ಶ್ರೀಮತಿ ಅನಿತಾ ಹಾಗು ಸುನೀತಾ ಅನಂತಸ್ವಾಮಿ ರೊಡನೆ ಒಂದು ಮಧುರವಾದ ಅನುಭವ , ಕವಿಗಳ ಮೇಲಿನ ಅಭಿಮಾನ ನನಗೆ ವಯ್ಯಕ್ತಿಕವಾಗಿ Fan Boy moment ಅನುಭವ, ಅವರ ನಿಂಬೆಗಿಡ ಹಾಡಂತೂ ಒಂದು ರೀತಿಯಲ್ಲಿ ಹರೆಯದವರಿಗೆ ಹಾಗು ಯುವಕಗಿರಿಗೆ anthem ಇದ್ದಂತೆ . ಇದು ಇಂಗ್ಲಿಷ್ ಕವಿತೆಯ ಅವತರಣಿ , ಅದನ್ನು ತುಂಬಾ ಸುಂದರವಾಗಿ ವಿವರಿಸಿದರು. ಕವಿಗಳೊಡನೆ ಸಮಯ ಕಳೆಯುವುದೆ ಒಂದು ಅದೃಷ್ಟ ಅನ್ನ ಬಹುದು . ಹಲವಾರು ವಿಷಯಗಳ ಗಣಿ. ಲಂಕೇಶ್ ಗರಡಿಯಲ್ಲಿ ಪಳಗಿದ ಇವರು ,U R ಅನಂತ ಮೂರ್ತಿ , ಗಿರೀಶ್ ಕಾರ್ನಾಡ್ ಅವರ ಸಮಕಾಲೀನರು . ಹಲವಾರು ಸ್ವಾರಸ್ಯಕರ ವಿಷಯಗಳನ್ನು ನಮ್ಮೊಡನೆ ಹಂಚಿಕೊಂಡರು. ಸಂಗೀತ ಸಾರಸ್ವದ ಲೋಕದಲ್ಲಿ ಸಿ ಅಶ್ವಥ್ , ಮೈಸೂರು ಅನಂತಸ್ವಾಮಿಯರೊಡನೆಯ ಒಡನಾಟ , ಹಾಗು ಇಬ್ಬರು ದಿಗ್ಗಜರು ಹಾಡಿದ ಪ್ರಥಮ ಭಾರಿಗೆ ಒಂದೇ ಹಾಡಿನಲ್ಲಿ ಧ್ವನಿ ಗೂಡಿ ಹಾಡಿಸಿದ ಕೀರ್ತಿ ಇವರದು. ಇಂದಿಗೂ ಜಾಲಿಬಾರಿನಲ್ಲಿ ಹಾಡುಕೇಳದ ಸಂಗೀತ ರಸಿಕರು ಇರಲಾರರು.

ಕರ್ನಾಟಕದ ಜನತೆಗೆ ಹಾಗು ಚುನಾವಣೆ ಆಯೋಗಕ್ಕೆ ಕರ್ನಾಟಕದ ಚುನಾವಣೆ ಸುಸೂತ್ರ ನಡೆಸಿದ್ದಿಕ್ಕೆ ಒಂದು ದೊಡ್ಡ ಚೆಪ್ಪಾಳೆ. ಕರ್ನಾಟಕದ ಪ್ರಬುದ್ಧ ಮತದಾರ ಮತ್ತೊಮ್ಮೆ ಏಕ ಸರ್ಕಾರಕ್ಕೆ ಸಂಪೂರ್ಣ ಬಹುಮತ ಕೊಟ್ಟು ಸಮಿಶ್ರ ಸರ್ಕಾರಗಳ ಇತಿಶ್ರೀ ಹಾಡಿದ್ದಾನೆ. ಕಾಂಗ್ರೆಸ್ ಸರ್ಕಾರದ ವಿಜಯಕ್ಕೆ ಸ್ವಾಗತ , ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ತಾವು ಪ್ರಣಾಳಿಕೆಯಲ್ಲಿ ತಿಳಿಸಿದ ಐದು Guarentee ಗಳನ್ನು ಹೇಗೆ ಜಾರಿ ಮಾಡುತ್ತದೆ ಅನ್ನುವುದೇ ಒಂದು ದೊಡ್ಡ ಸವಾಲು, ಮಹಿಳೆಯರಿಗೆ ಕ ರಾ ಸಾ ಸ ಬಸ್ ಗಳಲ್ಲಿ ಉಚಿತ ಪ್ರಯಾಣವಂತೂ ತುಂಬಾ ಆಕರ್ಷಣೀಯವಾಗಿದೆ , ಆದರೆ ಸಾರಿಗೆ ಸಂಸ್ಥೆಯ ಆರ್ಥಿಕ ಸ್ಥಿತಿ ಗತಿಗಳನ್ನು ನೋಡಿದರೆ ಕಾರ್ಯಕ್ರಮದ ಯಶಸ್ಸು ಕಾಂಗ್ರೆಸ್ ಬಜೆಟ್ ಮೇಲೆ ಅವಲಂಬಿತವಾಗಿದೆ. ಮುಂದಿನ ಸಂಚಿಕೆಯ ಹೊತ್ತಿಗೆ ಇನ್ನು ಹೆಚ್ಚಿನ ಕ್ಲಾರಿಟಿ ಸಿಗಬಹುದು.

ಅಮೆರಿಕಾಕ್ಕೆ ಶ್ರೀ ನರೇಂದ್ರ ಮೋದಿಯವರ ಆಗಮನ ಹಾಗು ಅಮೆರಿಕನ್ ಸಂಸದರ ಕಾಂಗ್ರೆಸ್ ನಲ್ಲಿ ಶ್ರೀ ಮೋದಿಯವರ ಮೋಡಿ ಮಾಡುವ ಮಾತುಗಳು ಎಲ್ಲರಿಂದ ಪ್ರಶಂಸೆ ಗೊಂಡಿದೆ . ರಿಪಬ್ಲಿಕನ್ಸ್ ಹಾಗು ಡೆಮೊಕ್ರಾಟ್ಸ್ ಎರಡು ಪಕ್ಷದ ಅಧ್ಯಕ್ಷರಿಗೆ ಮೋದಿ ಬಹಳವಾಗಿ ಹತ್ತಿರ ವಾಗಿ , ಅವರಿಗೆ ಶ್ವೇತ ಭವನದಲ್ಲಿ ಸಿಕ್ಕಿದ ರಾಜೋಪಚಾರವಂತೂ ಒಂದು ಅವಿಸ್ಮರಣೀಯ ಎನ್ನ ಬಹುದು.

ಮಣಿಪುರದಲ್ಲಿನ ನಡೆಯುತ್ತಿರುವ ಘಟನೆಗಳು ಮನ ಕಲಕುತ್ತಿವೆ , ಜನಾಂಗೀಯ ದ್ವೇಷಗಳು , ಸುಪ್ರೀಂಕೋರ್ಟ್ ತೀರ್ಪು , ಎಲ್ಲವೂ ಮೇಳೈಸಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ. ಮಹಿಳೆಯರ ಬೆತ್ತಲೆ ಪ್ರಸಂಗ ವಂತೂ ಜನ ಸಾಮಾನ್ಯರು ತಲೆ ತಗ್ಗಿಸುವಂತಿದೆ. ಅಲ್ಲಿನ ಶಾಂತಿ ನೆಲಸಲೆಂದು ಪ್ರಾರ್ಥಿಸೋಣ ಹಾಗು ಶೀಘ್ರವಾಗಿ ಮತೀಯ ಜನಾಂಗಗಳು ಒಗ್ಗಟ್ಟನ್ನು ತೋರಲಿ.

ಬೇಸಿಗೆಯ ಬೃಂದಾವನ ಪಿಕ್ನಿಕ್ ಕಾರ್ಯಕ್ರಮವಂತೂ ಅತ್ಯಂತ ಹೆಚ್ಚಿನ ಜನ ಸೇರಿ ಆಚರಿಸಿದರು , ಹಲವಾರು ಕ್ರೀಡೆಗಳು , ಊಟ ಹಾಗು ಸ್ಪರ್ಧೆಗಳು ಜನರ ಮೆಚ್ಚುಗೆ ಗಳಿಸಿತು.

ಪ್ರಧಾನ ಸಂಪಾದಕರು



**ಉಷಾ ಗಣಪತಿ**



**ಕೆ.ರಾಘವೇಂದ್ರ**



**ಪವಿತ್ರಾ ರಾಜೀವ್**




**ಚಂದ್ರ**



**ಗಾಯತ್ರಿ**

# ಅಧ್ಯಕ್ಷರ ಅಪೂರ್ವ ಅಂಕಣ

**ಬೃಂದಾವನದ ಬಂಧು ಬಾಂಧವರಿಗೆಲ್ಲ ನಮಸ್ಕಾರ, ನಮಸ್ಕಾರ, ನಮಸ್ಕಾರ**

ಕಳೆದ ವಾರ ಆಪ್ತಮಿತ್ರ ಚಲನಚಿತ್ರದ "ಕಾಲವನ್ನು ತಡೆಯೋರು ಯಾರೂ ಇಲ್ಲ......"ಹಾಡನ್ನು YouTube ನಲ್ಲಿ ಕೇಳುತ್ತಿದ್ದೆ. ಎಷ್ಟು ನಿಜ ಹಾಗು ಸಮಂಜಸ ಈ ನುಡಿಗಳು!!
ಮೊನ್ನೆ ಮೊನ್ನೆಯಷ್ಟೇ ಹೊಸವರ್ಷವನ್ನು ಸ್ವಾಗತಿಸಿ, ಬೃಂದಾವನದಲ್ಲಿ ಅಪೂರ್ವ ತಂಡದ ಕಾರ್ಯಕ್ರಮಗಳನ್ನು ಶುರು ಮಾಡಿದ್ದು, ಅವು ಇನ್ನೂ ನಮ್ಮ ಮನಗಳಲ್ಲಿ ವಸಂತ ಋತುವಿನ ಚಿಗುರೆಲೆಗಳಂತೆ, ಹಚ್ಚ ಹಸಿರಾಗಿರುವಂತೆಯೇ, ಜೂನ್ ತಿಂಗಳು ಬಂದೇಬಿಟ್ಟಿದೆ. ಆರು ತಿಂಗಳು ಕಳೆದದ್ದು ಗೊತ್ತಾಗಲಿಲ್ಲ!!

ಬೃಂದಾವನ ವಾಣಿಯ ಕಳೆದ ಸಂಚಿಕೆ ಬಿಡುಗಡೆಯಾದ ನಂತರ ನಮ್ಮ ತಂಡ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳು ಹಲವು.

ಏಪ್ರಿಲ್ ನ ವಿಶ್ವ Earth Day 2023 ರ ಸಂದೇಶ "Invest in your planet". ವಸುಧೈವ ಕುಟುಂಬಕಂ ಎಂದರೂ, ನಮ್ಮ ಬೃಂದಾವನವೇ ನಮ್ಮ ಪ್ರಪಂಚ\ಪೃಥ್ವಿ. "ಸುಮಧುರ ಸ್ನೇಹ ಸಮ್ಮಿಲನ, ನಮ್ಮೀ ಬೃಂದಾವನ" ನಮ್ಮ ಬೃಂದಾವನ ಪರಿವಾರ ಸದಸ್ಯರ ಬಾಂಧವ್ಯದ ಬೇರುಗಳನ್ನು ಮತ್ತಷ್ಟೂ ಗಟ್ಟಿಗೊಳಿಸುವುದೇ ನಮ್ಮ 'Investment plan' ಎಂಬ ಧ್ಯೇಯದಿಂದ ನಮ್ಮ ಬೃಂದಾವನಿಗರಿಗಾಗಿ ಹೊಸ ಹೊಸ ಕಾರ್ಯಕ್ರಮಗಳ ಸಿದ್ಧತೆ ನಡೆಸುತ್ತಾ ಇದ್ದೇವೆ.

ವರಕವಿ ಶ್ರೀ ದ. ರಾ. ಬೇಂದ್ರೆ ಯವರ ಯುಗಾದಿ ಕವಿತೆಯ "ವರುಷಕೊಮ್ಮೆ ಹೊಸತು ಜನ್ಮ... ಹರುಷಕೊಂದು ಹೊಸತು ನೆಲೆಯು "ಸಾಲುಗಳಂತೆ, ವರ್ಷ ವರ್ಷವೂ ಹೊಸ ಜನ್ಮ ಧರಿಸಿ ಅಮೇರಿಕಾದಲ್ಲಿ ನೆಲೆಸಿರುವ ನಮ್ಮೆಲ್ಲರಿಗೂ ಹರ್ಷವನ್ನು, ನವೋಲ್ಲಾಸವನ್ನು ಉಣಬಡಿಸುವ ವಸಂತನನ್ನು, ಅಷ್ಟೇ ಆದರದಿಂದ ನಾವು ನಮ್ಮ ಬೃಂದಾವನದಲ್ಲಿ ಪ್ರತಿ ಬಾರಿಯೂ ಹೊಸ ಹುಮ್ಮಸ್ಸಿನಿಂದ ಆಹ್ವಾನಿಸುತ್ತೇವೆ! ಕಳೆದ ಏಪ್ರಿಲ್ 23, 2023 ರಂದು ಅಕ್ಷಯ ತದಿಗೆ. ನ್ಯೂ ಜೆರ್ಸಿಯಲ್ಲಿರುವ ಬೃಂದಾವನಿಗರೆಲ್ಲರೂ ಸೇರಿ, ಸಂತಸದಿಂದ ವಸಂತನನ್ನು, ಕರೆತರಲು ಈ ಸುಮುಹೂರ್ತ ಕಾಲದಲ್ಲಿ, ಹೊಸ ಬಟ್ಟೆಗಳನ್ನು ತೊಟ್ಟು, ಎಲ್ಲರನ್ನೂ ಖುಷಿಯಿಂದ ಭೇಟಿಮಾಡಿ, ರುಚಿರುಚಿಯಾದ ತಿನಿಸುಗಳನ್ನು ಸವಿಯುತ್ತಾ, ಅವಿಸ್ಮರಣೀಯವಾಗಿ ಕಳೆದೆವು. ಅಂದು "ರಂಗಧ್ವನಿ ಹಾಗೂ ಕಸ್ತೂರಿ ಮೀಡಿಯಾ" ಅರ್ಪಿಸಿದ 'ಲೈಫು ಇಷ್ಟೇನೆ' ಹಾಸ್ಯ ನಾಟಕದ ಜೊತೆಗೆ ಬೃಂದಾವನ ಸದಸ್ಯರು , ಶಾಲಾ ಮಕ್ಕಳು ಪ್ರಸ್ತುತ ಪಡಿಸಿದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರೆದಿದ್ದ ಬೃಂದಾವನಿಗರೆಲ್ಲರೂ ಕಣ್ತುಂಬಿಕೊಂಡರು.

ವಿಶೇಷ ಆಹ್ವಾನಿತರಾಗಿದ್ದ ಕನ್ನಡದ ಹೆಸರಾಂತ ಸಾಹಿತಿ, ಕವಿ ಹಾಗೂ ಲೇಖಕರಾದ ಶ್ರೀ ಬಿ. ಆರ್. ಲಕ್ಷ್ಮಣ್ ರಾವ್ ಅವರ ಜೊತೆಗಿನ ಸಂವಾದ ಸಂಭಾಷಣೆಯು, ವಸಂತೋತ್ಸವದ ನಂತರವೂ ಅಪೂರ್ವ ಕಾರಂಜಿಯಲ್ಲಿ ಮುಂದುವರೆಯಿತು. ಮೈಸೂರು ಅನಂತ ಸ್ವಾಮಿಯವರ ಪುತ್ರಿಯರಾದ ಶ್ರೀಮತಿ ಸುನೀತಾ ಅನಂತಸ್ವಾಮಿ ಹಾಗು ಶ್ರೀಮತಿ ಅನಿತಾ ಅನಂತಸ್ವಾಮಿಯವರ ಜೊತೆ, ಶ್ರೀಮತಿ ವೈಷ್ಣವಿ, ಶ್ರೀಮತಿ ಉಷಾ ರಾಣಿಯವರು ಸೇರಿ ಬಿ. ಆರ್. ಎಲ್ ಅವರ ಕವನಗಳನ್ನು ಸುಶ್ರಾವ್ಯವಾಗಿ ಹಾಡಿದ್ದು ಇಡೀ ಕಾರ್ಯಕ್ರಮದ ಮೆರಗನ್ನು ಇಮ್ಮಡಿಗೊಳಿಸಿತ್ತು.

ಏಪ್ರಿಲ್ 29 ಮತ್ತು 30 ರಂದು ವಿಶೇಷ ಆಹ್ವಾನಿತರಾಗಿ ನಮ್ಮ ಬೃಂದಾವನಿಗರು , ನಮ್ಮ ನ್ಯೂ ಯಾರ್ಕ್ ಕನ್ನಡ ಕೂಟದ ಸುವರ್ಣ ಮಹೋತ್ಸವದಲ್ಲಿ ಪಾಲ್ಗೊಂಡರು. ಸುಮಾರು 100 ಸದಸ್ಯರು, 2 ದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ನ್ಯೂ ಯಾರ್ಕ್ ಕನ್ನಡ ಕೂಟಕ್ಕೆ ತಮ್ಮ ಪ್ರೋತ್ಸಾಹ ನೀಡಿದ್ದರು. ಅದೇ ವೇದಿಕೆಯ ಮೇಲೆ, ನಮ್ಮ ಬೃಂದಾವನದ ಮಕ್ಕಳು "ಅಪ್ಪಯ್ಯ ಕಳೆದು ಹೋಗಿದ್ದಾರೆ"; ನಾಟಕವನ್ನು ಅಮೋಘವಾಗಿ ಅಭಿನಯಿಸಿದರೆ, ಜೊತೆಗೆ ನಮ್ಮ ಬೃಂದಾವನದ ಬೆಡಗಿಯರು ಆಕರ್ಷಕ ನೃತ್ಯ ಪ್ರದಶನವನ್ನಿತ್ತರು. ವೇದಿಕೆಯ ಮೇಲೆ ನಮ್ಮ ಬೃಂದಾವನಿಗರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರೆ, ಉಳಿದವರು ಮೆರವಣಿಗೆ ಹಾಗೂ ಇತರ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಮನರಂಜಿಸಿದರು. ಬೃಂದಾವನದ ವೈವಿಧ್ಯಮಯವಾದ ಕಾರ್ಯಕ್ರಮವನ್ನು ಪ್ರದರ್ಶಿಸಲು ಪರಿಣಿತಗೊಳಿಸಿದ ಎಲ್ಲರಿಗೂ ನಾನು ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇನೆ!

ಮೇ ಎರಡನೇ ವಾರದಲ್ಲಿ ಈಸ್ಟ್ ವಿಂಡ್ಸರ್ ನ ಮರ್ಸರ್ ಕೌಂಟಿ ಗ್ರಂಥಾಲಯದಲ್ಲಿ "ರಂಗ ತರಂಗ "ಶಿಬಿರವನ್ನು ಬೃಂದಾವನದ ಶಿಕ್ಷಕರೂ ಹಾಗೂ ಆಸಕ್ತ ಸದಸ್ಯರಿಗಾಗಿ" ಬೃಂಕ್ಯಿ ಸರಣಿ" ಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಒಂದು ನಾಟಕವನ್ನು ಮಕ್ಕಳಿಂದ ಮಾಡಿಸಲು, ಅವಶ್ಯವಿರುವ ವಿವಿಧ ವಿಷಯಗಳ ಬಗ್ಗೆ ತಿಳಿಸಿ - ತೋರಿಸಿಕೊಡುತ್ತಾ ಉಮಾ ಮೂರ್ತಿ, ವಿನುತಾ ಶ್ರೀಧರ್ ಅವರ ತಂಡ, ಶಿಭಿರಾರ್ಥಿಗಳನ್ನು ತಯಾರು ಮಾಡಿದರು. ನಮ್ಮ ಬೃಂದಾವನ ಕನ್ನಡ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಕನ್ನಡ ಕಲಿಕೆಯನ್ನು ಪ್ರೋತ್ಸಾಹಿಸುವ ನಮ್ಮ ಶಾಲೆಗಳ ಶಿಕ್ಷಕರಿಗೂ ಪೋಷಕರಿಗೂ ಅನಂತಾನಂತ ಧನ್ಯವಾದಗಳು.

ಬೃಂದಾವನಿಗರು ಎದುರು ನೋಡುತ್ತಿದ್ದ ಚಟುವಟಿಕೆ-ವನವಿಹಾರ!! ನನ್ನ ಅಪೂರ್ವ ತಂಡದ ನಿರ್ದೇಶಕರು, ಬೃಂದಾವನದ ಸ್ವಯಂಸೇವಕರೆಲ್ಲರ ಸಹಾಯದಿಂದ ಜೂನ್ 18 ರಂದು, ಹೈಲ್ಯಾಂಡ್ ಪಾರ್ಕ್ ನ ಡೋನಾಲ್ಡ್ಸನ್ ಪಾರ್ಕ್ ನಲ್ಲಿ ನಡೆಸಿಕೊಟ್ಟ ವನವಿಹಾರದಲ್ಲಿ ಭಾಗವಹಿಸಿದ ಎಲ್ಲರೂ ವಿವಿಧ ಆಟ, ಓಟದಲ್ಲಿ, ಕ್ರಿಕೆಟ್, ವಾಲಿಬಾಲ್ ಆಟಗಳಲ್ಲಿ ಮಾತ್ರವಲ್ಲದೆ, ಚೌಕಾಭಾರದಿಂದ-ಟೆನ್ನಿಕೊಯ್ಟ್ ನಲ್ಲೂ ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು. "Father' day" ಪ್ರಯುಕ್ತ ಈ ಸಲ ಆಯೋಜಿಸಲಾಗಿದ್ದ ಹೊಸ ಹೊಸ ಆಟಗಳನ್ನು ಕುಟುಂಬದ ಸದಸ್ಯರೆಲ್ಲ (family ಗೇಮ್ಸ್ ನಲ್ಲಿ) ಜೊತೆಗೂಡಿ ಆಡುತ್ತಾ ಆನಂದಿಸಿದರು. ಬೃಂದಾವನ ಕನ್ನಡ ಶಾಲೆಗಳ "ಚಿಣ್ಣರಿಗಾಗಿ ಪುಸ್ತಕ ಅಭಿಯಾನ" ದಲ್ಲಿ ಚಿಣ್ಣರು ತಮ್ಮ ನೆಚ್ಚಿನ ಪುಸ್ತಕಗಳನ್ನು ಓದುವುದರಲ್ಲಿ ಆಸಕ್ತಿ ವಹಿಸಿದರೆ, ದೊಡ್ಡವರು ಬೃಂದಾವನದ Small business vendorsಗಳನ್ನು ಪ್ರೋತ್ಸಾಹಿಸಿದರು. ಇದೇ ರೀತಿ ಇನ್ನೂ ಹಲವಾರು ಸ್ಥಳೀಯ ಸಣ್ಣ ಉದ್ಯಮಗಳಿಗೆ ನೆರವಾಗುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಈ Picnic ನಲ್ಲಿ, ನಮ್ಮ ಬೃಂದಾವನದ ಗ್ರಾಜುಯೇಟ್ಸ್ ಗಳನ್ನೂ ಅಭಿನಂದಿಸಿದೆವು ಎಂದಿನಂತೆಯೇ, ಯುವ-ಬೃಂದಾವನದ ಸದಸ್ಯರು, PVSA ಯ ನಾನಾ ವಿಭಾಗಳಲ್ಲಿ ನಾಯಕತ್ವದ ಪಾತ್ರಗಳನ್ನು ಮುತುವರ್ಜಿಯಿಂದ ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿರುತ್ತಾರೆ ಎಂದು ತಿಳಿಸಿಕೊಡಲು ಹೆಮ್ಮೆಯಾಗುತ್ತಿದೆ.

ಪುಸ್ತಕದ ವಿಷಯ ಬಂದಾಗ ಶಾಲೆ ನೆನಪಾಗುತ್ತದೆ. ಭಾರತದಲ್ಲಿ ಮಳೆಗಾಲ ಶುರುವಾಗುತ್ತಿದ್ದಂತೆ ಶಾಲೆ ಶುರು. ಆದರೆ ಇಲ್ಲಿ ಮಕ್ಕಳಿಗೆ ಶಾಲೆ ಮುಗಿದ ಸಂತಸ. ನಮ್ಮ 40ಕ್ಕಿಂತ ಹೆಚ್ಚಿನ ಸ್ವಯಂ-ಪ್ರೇರಿತ ಶಿಕ್ಷಕರಿಗೆ ಸಂತಸದ ವಿಷಯವೇನೆಂದರೆ, ಜೂನ್ ನಲ್ಲಿ ನಮ್ಮ 7 ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳು 1 ಅಥವಾ 2 ಹಂತಗಳಲ್ಲಿ ತೇರ್ಗಡೆ ಹೊಂದಿ ತಮ್ಮ ಕನ್ನಡ ಕೌಶಲ್ಯವನ್ನು ಮತ್ತೊಂದು ಸ್ತರಕ್ಕೆ ತೆಗೆದುಕೊಂಡು ಹೋಗಿರುತ್ತಾರೆ.

ಬೇಸಿಗೆಯ ರಜೆ ಮುಗಿಯುತ್ತಿದ್ದಂತೆಯೇ, ಬರುವ ಶೈಕ್ಷಣಿಕ ವರ್ಷದ ನೋಂದಾವಣಿಗೆ ತಯಾರಿ. ಇದಕ್ಕಾಗಿ ಶ್ರಮಿಸುವ ಬೃಂದಾವನ ಕನ್ನಡ ಕಲಿಸೋಣ ಶಾಲೆಗಳ ಶಿಕ್ಷಕರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ನಮ್ಮ ಬೃಂದಾವನದಲ್ಲಿ ಪ್ರತಿಯೊಬ್ಬರೂ ಸಹಕರಿಸಿದರೆ, ನಮ್ಮ ಶಾಲೆಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಕನ್ನಡ ಕಲಿಸಲು ಸಾಧ್ಯ. ತಾವೆಲ್ಲರೂ ನಮ್ಮ ಶಾಲೆಗಳಲ್ಲಿ ಕನ್ನಡ ಕಲಿಸಿ , ಮಕ್ಕಳಲ್ಲಿ ಕನ್ನಡದ ಮೇಲಿನ ಆಸಕ್ತಿ ಹೆಚ್ಚಿಸಿ, ಭಾಷೆಯ ಮೇಲೆ ಪ್ರೀತಿ ಬೆಳೆಸಲು ಸಹಾಯ ಹಸ್ತ ನೀಡುವಿರಾ?


ಇನ್ನು ನಮ್ಮ ಬೃಂದಾವನ ಸದಸ್ಯರಿಂದ-ಸದಸ್ಯರಿಗಾಗಿಯೇ ನಿರಂತರವಾಗಿ ನಡೆಯುತ್ತಿರುವ ಹಾಗು ಮುಂದೆ ನಡೆಯಲಿರುವ ಕಾರ್ಯಕ್ರಮಗಳ ಬಗ್ಗೆ ಒಂದು ಪಕ್ಷಿನೋಟ ವನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಸಾಹಿತ್ಯಾಸಕ್ತರಿಗಾಗಿ, ಪುಸ್ತಕ ಚಾವಡಿಯಲ್ಲಿ "ಹೂವು ಮತ್ತು ಹೆಣ್ಣು"  ಪುಸ್ತಕಾವಲೋಕನ ಮಾಡಿ, ಈ ತಿಂಗಳು ಶ್ರೀ. ಎಸ.ಎಲ್. ಭೈರಪ್ಪನವರ 'ದಾಟು" ಪುಸ್ತಕದ ಬಗ್ಗೆ ವಿಮರ್ಶೆ ನಡೆಯುವುದು. ತಾವೆಲ್ಲರೂ ಆ ಪುಸ್ತಕವನ್ನು ಓದಿ, ವಿಮರ್ಶೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರೆಂದು ಆಶಯ.

ಬೃಂದಾವನಿಗರ ಆರೋಗ್ಯಕ್ಕಾಗಿ, PBC-ಪ್ರಕೃತಿ ಬೃಂದಾವನ ಗುಂಪಿನಲ್ಲಿ, ಮಳೆ, ಗಾಳಿ ಲೆಕ್ಕಿಸದೆ ಬಿರುಸಿನಿಂದ ಚಟುವಟಿಕೆಗಳು ಪುನರಾರಂಭವಾಗಿವೆ. ದಯವಿಟ್ಟು ಚಳಿಬಿಟ್ಟು, ಬೆಳಗೆದ್ದು ನಮ್ಮ ತಂಡದ ಜೊತೆ ಜೊತೆಯಾಗಿ ನಡೆಯಿರಿ. Garden state-ನ್ಯೂ ಜೆರ್ಸಿ ಹಾಗೂ ಸಮೀಪದಲ್ಲಿನ ನೈಸರ್ಗಿಕ ಸೊಬಗನ್ನೂ ಸವಿಯಿರಿ. ಒಟ್ಟಿನಲ್ಲಿ ಆರೋಗ್ಯ ನೋಡಿಕೊಳ್ಳಿ.

ಸೆಪ್ಟೆಂಬರ್ ಬಂದರೆ ಶಾಲೆ ಶುರು ಆಗಿಯೇಬಿಡುತ್ತದೆ. ಅದರ ಜೊತೆಗೆ ಬೃಂದಾವನದಲ್ಲಿ ಗಣೇಶೋತ್ಸವಕ್ಕೆ ತಯಾರಿಯೂ ಆಗುತ್ತಿರುತ್ತದೆ. ಶೀಘ್ರದಲ್ಲೇ, ಅದರ ವಿವರಗಳನ್ನು ತಿಳಿಸುತ್ತೇವೆ. ನೀವೆಲ್ಲರೂ ಎಂದಿನಂತೆಯೇ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಿರೆಂದು ಅಪೇಕ್ಷೆ.

ಈ ಸಲದ "ಬೃಂದಾವನ ವಾಣಿಯ" ಸಂಚಿಕೆಯನ್ನು, ಓದಿ ಆಸ್ವಾದಿಸಲು ನಿಮ್ಮೆಲ್ಲರನ್ನೂ ಸ್ವಾಗತಿಸುತ್ತಾ, ನಮ್ಮೀ ಅಪೂರ್ವ ತಂಡವು ನಿಮ್ಮೀ ಸುಮಧುರ, ಸ್ನೇಹ ಸಮ್ಮಿಲನದಿಂದ ಹೀಗೆಯೇ ಮುಂದುವರೆಯಲಿ ಎಂದು ಆಶಿಸುತ್ತಾ,



**ಅರ್ಚನಾ ಆಚಾರ್ಯ,**
**ಅಪೂರ್ವ ತಂಡ, ಬೃಂದಾವನ, ನ್ಯೂ ಜೆರ್ಸಿ.**



# ತಾಳ್ಮೆ

**ಶ್ರೀ ಯೋಗೀಂದ್ರ ಭಟ್ ಉಳಿ.** ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.

ನಾವು ಎಂದಿಗೂ ಸಿಟ್ಟು ಮಾಡಿಕೊಳ್ಳಬಾರದು. ತಾಳ್ಮೆ ಕಳೆದುಕೊಳ್ಳಬಾರದು. ಎಲ್ಲರೊಂದಿಗೂ ಸಂಯಮದಿಂದಲೇ ವ್ಯವಹರಿಸಬೇಕು. ಯಾವಾಗಲೂ, ಎಲ್ಲರ ದೃಷ್ಟಿಯಲ್ಲಿಯೂ ಒಳ್ಳೆಯವರೆನಿಸಿಕೊಳ್ಳಬೇಕು ಎಂಬುವುದು ನಮ್ಮೆಲ್ಲರ ಅಂತರಂಗದ ಅಪೇಕ್ಷೆ. ಆದರೇನು ಮಾಡೋಣ? ಅನೇಕ ಸಂದರ್ಭಗಳಲ್ಲಿ ಒದಗಿಬರುವ ಅನಿರೀಕ್ಷಿತ ಸನ್ನಿವೇಶಗಳು ನಮ್ಮ ವರ್ತನೆಯನ್ನು ನಮಗರಿವಿಲ್ಲದಂತೆಯೇ ಬದಲಿಸಿ ಬಿಡುತ್ತವೆ! ನಂತರ ನಮ್ಮ ಅನಪೇಕ್ಷಿತ ವರ್ತನೆಯ ಮೇಲೆ ನಮಗೇ ಮುಜುಗರವಾಗುವಂತೆ ಮಾಡಿಬಿಡುತ್ತವೆ!

ವಿದ್ಯಾರ್ಥಿಗಳಾಗಿ ಪರೀಕ್ಷೆಯನ್ನು ಎದುರಿಸುವಾಗ , ಉದ್ಯೋಗಾಂಕ್ಷಿಗಳಾಗಿ ಸಂದರ್ಶನಕ್ಕೆ ಸನ್ನದ್ಧರಾದಾಗ, ಮೊದಲ ಬಾರಿಗೆ ವೇದಿಕೆಯನ್ನೇರಿದಾಗ, ಭಾಷಣ ಮಾಡುವಾಗ ಹೀಗೆ ಜೀವನದ ನಾನಾ ಆಯಾಮಗಳಲ್ಲಿ ನಾವು ಸಾಕಷ್ಟು ಪೂರ್ವ ಸಿದ್ಧತೆ ಮಾಡಿಕೊಂಡಿದ್ದರೂ , ಸಂಭವಿಸುವ ಅನಿರೀಕ್ಷಿತ ಸನ್ನಿವೇಶಗಳು ನಮ್ಮನ್ನು ವಿಚಲಿತರನ್ನಾಗಿ ಮಾಡಿಬಿಡುತ್ತವೆ. ಆ ಕ್ಷಣಕ್ಕೆ ಇದ್ದಕ್ಕಿದ್ದಂತೆ ನಮ್ಮೊಳಗೆ ಭಯವೋ, ಆತಂಕವೋ ಸೃಷ್ಟಿಯಾಗಿ ನಮ್ಮ ಆತ್ಮವಿಶ್ವಾಸವೇ ಕುಂದಿಹೋಗುತ್ತದೆ. ತಪ್ಪುಗಳು ಸಂಭವಿಸಿಯೇ ಬಿಡುತ್ತವೆ.

ಬಹುಶಃ ಇಂತಹ ಅನಪೇಕ್ಷಿತ ಸಂದರ್ಭಗಳಿಗೆ ಮೂಲ ಕಾರಣ ನಮ್ಮೊಳಗಿನ ತಾಳ್ಮೆಯ ಕೊರತೆ ಎಂದೆನಿಸುತ್ತದೆ. ಪ್ರತಿಕ್ರಿಯೆಗಿಂತ ಮುಂಚೆ ಸ್ವಲ್ಪವಾದರೂ ಸಮಯಾವಕಾಶವನ್ನು ತೆಗೆದುಕೊಂಡರೆ ನಮಗೆ ತತ್ಕಾಲೀನ ಪರಿಸ್ಥಿತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳುವ ಅವಕಾಶವಿರುತ್ತದೆ. ಯಾವುದಕ್ಕೂ ನಾವು ಮೊದಲು ಅವಸರವನ್ನು ಬಿಡಬೇಕು. ಕಿಂಚಿತ್ತಾದರೂ ಅವಲೋಕಿಸಿಯೇ ಪ್ರಯತ್ನಿಸುವ ತಾಳ್ಮೆ ಬೇಕು. ಜೀವನದಲ್ಲಿನ ಅನೇಕ ದುರ್ಘಟನೆಗಳು ಸಂಭವಿಸುವುದು ಅವಸರದಿಂದಲೇ.

ಎಲ್ಲ ಸನ್ನಿವೇಶಗಳಲ್ಲಿಯೂ ಸಮಚಿತ್ತತೆಯನ್ನು ಸಾಧಿಸುವುದು ಯಾರಿಗೂ ಸುಲಭವಲ್ಲ. ಕೆಲವು ಮಹನೀಯರು ಜೀವನದಲ್ಲಿ ಎಂಥೆಂತಹ ಸವಾಲುಗಳನ್ನು ಎದುರಿಸಿದರೂ ತಮ್ಮ ಮಾತು, ವರ್ತನೆ, ಪ್ರವೃತ್ತಿಯಲ್ಲಿನ ಘನತೆ ಮತ್ತು ಏಕತಾನತೆಯನ್ನೆಂದಿಗೂ ಹಳಿತಪ್ಪಲು ಬಿಡುವುದಿಲ್ಲ. ಜೀವನಾನುಭವ ಮತ್ತು ಆತ್ಮಸಂಯಮದ ಸಾಧನೆಯೇ ಅವರ ಆ ಮಾನಸಿಕ ಸ್ಥೈರ್ಯದ ರಹಸ್ಯ ಎನ್ನಬಹುದು.


ಮನಸ್ಸು ಸ್ವಭಾವತಃ ಚಂಚಲ. ಎಲ್ಲ ಸಮಯದಲ್ಲೂ ಒಂದೇ ರೀತಿ ಇರುವುದಿಲ್ಲ. ಸುತ್ತಮುತ್ತಲಿನ ಸನ್ನಿವೇಶ, ಸಮೀಪವರ್ತಿಗಳ ವರ್ತನೆ, ಅಸಹಕಾರ, ಕೆಲಸದ ಒತ್ತಡ, ದೈಹಿಕ ನ್ಯೂನತೆಗಳು, ಆರೋಗ್ಯ ಹೀಗೆ ನಮ್ಮ ಭಾವ ವ್ಯತ್ಯಾಸಗಳಿಗೆ ಅನೇಕ ಕಾರಣಗಳನ್ನು ಗುರುತಿಸಬಹುದು. ತತ್ಪರಿಣಾಮದಿಂದ ಕೆಲವೊಮ್ಮೆ ಸಿಟ್ಟು, ಕೆಲವೊಮ್ಮೆ ಬೇಸರ, ಅಸಮಾಧಾನ, ಸಂತೋಷ, ಉತ್ಸಾಹ. ಹೀಗೆ ನಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳಿಗನುಗುಣವಾಗಿ ನಮ್ಮ ವರ್ತನೆ ಮತ್ತು ವ್ಯವಹಾರಗಳು ರೂಪುಗೊಳ್ಳುತ್ತವೆ.

ಬಿಸಿಯಾದ ಬಾಣಲೆಯನ್ನು ತಣ್ಣಗಾಗಿಸಲು ತತ್ ಕ್ಷಣದಲ್ಲಿ ಸಾಧ್ಯವಿಲ್ಲ. ಬೆಂಕಿಯಿಂದ ದೂರ ಮಾಡಿದ ಮೇಲೂ ತಣಿಯಲು ಮತ್ತಷ್ಟು ಸಮಯ ಬೇಕು. ಘಾಸಿಗೊಂಡ ಮನಸ್ಸಿಗೂ ಹಾಗೆಯೇ. ಘಾತ ಅನಿರೀಕ್ಷಿತ. ಆದರೆ ಸಮಾಧಾನವಾಗಲು ಸಮಯಾವಕಾಶ ಬೇಕಾಗುತ್ತದೆ. ಅಲ್ಲಿಯ ತನಕ ತಾಳ್ಮೆಯಿಂದ ಕಾಯಬೇಕು. ಅವಸರದ ಪ್ರವೃತ್ತಿ ಯಾವತ್ತಿಗೂ ಅಪಾಯಕಾರಿ.

ನಮ್ಮ ಜೀವನವನ್ನೊಂದು ಅನಿರೀಕ್ಷಿತ ಸವಾಲುಗಳ ಸರಮಾಲೆ ಎನ್ನಬಹುದು. ಬದುಕಿನುದ್ದಕ್ಕೂ ಸಂಭವಿಸಬಹುದಾದ ದುರ್ಘಟನೆಗಳ ಬಗ್ಗೆ ನಾವು ಎಷ್ಟು ಜಾಗರೂಕರಾಗಿದ್ದರೂ ಸಾಲದು. ನಮ್ಮ ಸಮೀಪವರ್ತಿಗಳ ಮನಸ್ಥಿತಿ, ಸುತ್ತಲಿನ ಪರಿಸ್ಥಿತಿ ಇತ್ಯಾದಿಗಳ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಅರಿತುಕೊಂಡು ಎಚ್ಚರಿಕೆಯಿಂದ ವ್ಯವಹರಿಸಬೇಕು. ಗೊತ್ತಿಲ್ಲದ ರಸ್ತೆಯಲ್ಲಿ ವಾಹನ ಚಲಾಯಿಸುವಂತೆ. ಎದುರಿನವ ದಾರಿ ತಪ್ಪಿಬಂದರೂ ನಾವು ಸರಿಪಡಿಸಿಕೊಂಡು ಹೋಗಬೇಕು. ಸಂಭಾವ್ಯ ದುರಂತಗಳಿಂದ ನಮ್ಮನ್ನು ಸಂರಕ್ಷಿಸಿಕೊಳ್ಳಲು ನಮಗೆ ಮುಖ್ಯವಾಗಿ ಬೇಕಾಗಿರುವುದು ಎಚ್ಚರಿಕೆ. ನಾವು ಜಾಗ್ರತರಾಗಿರಬೇಕು. ತಾಳ್ಮೆ ಕಳೆದುಕೊಳ್ಳಬಾರದು.

# ಹಿನ್ನೋಟ

ಗ್ರೀಷ್ಮ ಗಾಯನ



# ಒಂದು ಸುಮಧುರ ನೆನಪು

**ಬಿ.ಆರ್.ಲಕ್ಷ್ಮಣರಾವ್,** ಬೆಂಗಳೂರು

2010ರಲ್ಲಿ ನ್ಯೂಜರ್ಸಿಯ ಎಡಿಸನ್ನಿನಲ್ಲಿ ನಡೆದ 'ಅಕ್ಕ' ಸಮ್ಮೇಳನಕ್ಕೆ ಬಂದುಹೋದ ನಂತರ ನಾನು ಅಮೆರಿಕಾಗೆ ಬಂದಿರಲಿಲ್ಲ. ಇದೀಗ ಕ್ಯಾಲಿಫೋರ್ನಿಯಾದ ಸ್ಯಾನ್ ಹೊಸೆಯಲ್ಲಿ ನೆಲೆಸಿರುವ ನನ್ನ ಎರಡನೆಯ ಮಗ ಸಂತೋಷನ ಒತ್ತಾಯಕ್ಕೆ ಮಣಿದು ನನ್ನ ಮಡದಿ ಗಿರಿಜಳೊಂದಿಗೆ ಕೇವಲ ಒಂದೂವರೆ ತಿಂಗಳ ವಾಸ್ತವ್ಯಕ್ಕಾಗಿ ಬಂದಿದ್ದೇನೆ. ಇದೇ ಸಂದರ್ಭದಲ್ಲಿ ಇಲ್ಲಿನ ಕೆಲವು ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸುಯೋಗವೂ ನನಗೆ ಒದಗಿಬಂದಿದೆ. ಇದಕ್ಕಾಗಿ ನನ್ನ ಈ ಬಾರಿಯ ಅಮೆರಿಕದ ಎಲ್ಲ ಕಾರ್ಯಕ್ರಮಗಳ ಆಯೋಜಕರಾದ ಪ್ರಿಯ ಶ್ರೀ ವಲ್ಲೀಶ್ ಶಾಸ್ತ್ರಿ ಅವರಿಗೆ ನಾನು ಆಭಾರಿಯಾಗಿದ್ದೇನೆ. ಹಾಗೆಯೇ ನ್ಯೂಜರ್ಸಿಯಲ್ಲಿ ನಮ್ಮ ವಾಸ್ತವ್ಯ ಮತ್ತು ಆತಿಥ್ಯವನ್ನು ಪ್ರೀತಿಯಿಂದ ನಿರ್ವಹಿಸಿದ ಶ್ರೀಮತಿ ಹರಿತಾ ಹಾಗೂ ಶ್ರೀ ಭಾಸ್ಕರ್ ತೈಲಿಗೇರಿ ದಂಪತಿಗೂ ನನ್ನ ಧನ್ಯವಾದಗಳು.

ನ್ಯೂಜರ್ಸಿಯಲ್ಲಿರುವ 'ಬೃಂದಾವನ' ಕನ್ನಡ ಕೂಟದ ಬಗ್ಗೆ ನನಗೆ ವಿಶೇಷ ಅಕ್ಕರೆ. ಏಕೆಂದರೆ ನನ್ನನ್ನು 'ಅಕ್ಕ' ಸಮ್ಮೇಳನಕ್ಕೆ ಕರೆಸಿಕೊಂಡಿದ್ದೇ ಆಗ ಅದರ ಆತಿಥ್ಯ ವಹಿಸಿದ್ದ ಈ ಕೂಟ. ಇದರ ಆಶ್ರಯದಲ್ಲಿ ಏಪ್ರಿಲ್ 23, ಭಾನುವಾರದಂದು ಏರ್ಪಡಿಸಲಾಗಿದ್ದ 'ವಸಂತೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಲು ಹಾಲಿ ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಅವರಿಂದ ನಾನು ಆಹ್ವಾನಿತನಾಗಿದ್ದೆ.

'ವಸಂತೋತ್ಸವ' ಕಾರ್ಯಕ್ರಮವು ಅತ್ಯಂತ ಪ್ರಸ್ತುತ ಹಾಗೂ ಅರ್ಥಪೂರ್ಣವಾಗಿತ್ತು. ಏಕೆಂದರೆ ಇದರಲ್ಲಿ ಭಾಗವಹಿಸಿದ್ದವರು ಬಹುಪಾಲು ಮಕ್ಕಳು. ಅವರದ್ದೇ ಹಾಡು, ನೃತ್ಯ ಮತ್ತು ನಾಟಕಗಳು. ಎಳೆ ವಯಸ್ಸಿನಲ್ಲೇ ಮಕ್ಕಳಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಕ್ಕರೆ ಅಭಿಮಾನ ಮೂಡಿಸುವಲ್ಲಿ, ಕನ್ನಡತನ ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳು ವಹಿಸುವ ಪಾತ್ರ ಮಹತ್ವದ್ದು. ಇದರ ಜೊತೆಗೆ ಹಿರಿಯರೂ ಸಹ ಜನಪದ ನೃತ್ಯಗಳನ್ನು ಸೊಗಸಾಗಿ ನಡೆಸಿಕೊಟ್ಟರು. ಇವುಗಳಿಗೆ ಕಿರೀಟವಿಟ್ಟಂತೆ ಕೊನೆಯ ಕಾರ್ಯಕ್ರಮವಾಗಿ ಬೆಂಗಳೂರಿನಿಂದ ಬಂದ ಖ್ಯಾತ ಅಭಿನೇತ್ರಿ ವೀಣಾ ಮತ್ತು ಖ್ಯಾತ ನಟ ಸುಂದರ್ ದಂಪತಿ ತಮ್ಮ ತಂಡದೊಂದಿಗೆ ಪ್ರಸ್ತುತ ಪಡಿಸಿದ ನಗೆನಾಟಕ 'ಲೈಫು ಇಷ್ಟೇನೆ?!' ವೀಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಿತು.

ನ್ಯೂಜರ್ಸಿಯಲ್ಲಿರುವ ಶ್ರೀಮತಿ ಉಷಾ ಮತ್ತು ಶ್ರೀ ಪ್ರಸನ್ನ ಕುಮಾರ್ ದಂಪತಿಯ ನಿವಾಸ 'ಸಂತೃಪ್ತಿ' ನಿಜಕ್ಕೂ ಎರಡು ದಶಕಗಳಿಂದ ಕರ್ನಾಟಕದಿಂದ ಬರುವ ಎಲ್ಲ ಕಲಾವಿದರಿಗೆ ತವರುಮನೆ ಇದ್ದಂತಿದೆ. ಇಲ್ಲಿಗೆ ಬಂದು, ಬಿಡಾರ ಹೂಡಿ, ಪ್ರೀತಿಯ ಆದರಾತಿಥ್ಯ ಸ್ವೀಕರಿಸಿ, 'ಸಂತೃಪ್ತಿ'ಯಿಂದ ಹೋಗದೇ ಇರುವ ಕಲಾವಿದರೇ ವಿರಳ. ಈ ಬಾರಿ ನನಗೂ ಮತ್ತು ನನ್ನ ಮಡದಿಗೂ ಈ ಸುಯೋಗ ಒದಗಿ ಬಂತು. ದಿನಾಂಕ 27 ಗುರುವಾರ ಸಂಜೆ 'ಸಂತೃಪ್ತಿ' ಯ ನೆಲಮಾಳಿಗೆಯ ಸಭಾಂಗಣದಲ್ಲಿ ನನ್ನೊಂದಿಗೆ ಸಂವಾದ ಕಾರ್ಯಕ್ರಮವು 'ಬೃಂದಾವನ' ಕನ್ನಡ ಕೂಟದಿಂದ ಜೂಮ್ ಮತ್ತು ಫೇಸ್‌ಬುಕ್ ಲೈವಿನಲ್ಲಿ ಏರ್ಪಾಡಾಗಿತ್ತು. ಇದನ್ನು 'ಬೃಂದಾವನ'ದ ಸಾಹಿತ್ಯ ನಿರ್ದೇಶಕರಾದ ಶ್ರೀ ರಾಘವೇಂದ್ರ ಕುಂದಲಗುರ್ಕಿ ಅವರು ನಡೆಸಿಕೊಟ್ಟರು. ನನ್ನ ಭಾವಗೀತೆಗಳನ್ನು ಶ್ರೀಮತಿಯರಾದ ಸುನೀತ ಅನಂತಸ್ವಾಮಿ, ಅನಿತ ಬರು, ವೈಷ್ಣವಿ ಮತ್ತು ಉಷಾ ರಾಣಿ ಸುಶ್ರಾವ್ಯವಾಗಿ, ಭಾವಪೂರ್ಣವಾಗಿ ಹಾಡಿದರು. ಅಲ್ಲಿ ನೆರೆದಿದ್ದ ಕಾವ್ಯಾಭಿಮಾನಿಗಳೂ ಸಹ ಸಂವಾದದಲ್ಲಿ ಭಾಗಿಗಳಾಗಿದ್ದರು. ಪುಷ್ಕಳವಾದ ಸವಿ ಭೋಜನದೊಂದಿಗೆ ಕಾರ್ಯಕ್ರಮವು 'ಸಂತೃಪ್ತಿ'ಯಿಂದ ಸಂಪನ್ನಗೊಂಡಿತು.

ಒಟ್ಟಾರೆ ನ್ಯೂಜರ್ಸಿ ಪ್ರಾಂತ್ಯದಲ್ಲಿ ಕನ್ನಡದ ವಾತಾವರಣವನ್ನು 'ನಿತ್ಯ ಹರಿದ್ವರ್ಣ'ವಾಗಿ ಉಳಿಸಿಕೊಂಡು, ಬೆಳೆಸಿಕೊಂಡು ಬರುತ್ತಿರುವ 'ಬೃಂದಾವನ' ಕನ್ನಡ ಕೂಟವು ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರವಾಗಿದೆ.



# ಬೃಂದಾವನ ಪಿಕ್ನಿಕ್

**ಲಕ್ಷ್ಮಿ ಕೊಲಾಲ್,** ನ್ಯೂಜೆರ್ಸಿ

ಅಮೆರಿಕಾದಲ್ಲಿ ಬೇಸಿಗೆ ಶುರುವಾಗುವ ಸಮಯ ಪ್ರತಿಯೊಬ್ಬರಿಗೂ ಯಾವಾಗ ಹೊರಗೆ ಹೋಗಿ ಪ್ರಕೃತಿಯನ್ನು ಸವಿಯುವೆವು ಎನ್ನುವ ಕಾತರ ತುಂಬಿರುತ್ತದೆ . ನಾವೆಲ್ಲಾ ಕಾಯುತ್ತಿದ್ದ ಬೇಸಿಗೆ ಬಂದೇ ಬಿಟ್ಟಿತು .

ಬೃಂದಾವನ ಕನ್ನಡ ಕೂಟ ಅಪೂರ್ವ ತಂಡದ ಕಾರ್ಯಕರ್ತರೆಲ್ಲ ಒಂದಾಗಿ ಜೂನ್ 18 ಭಾನುವಾರ 2023 ಸರಿಯಾದ ದಿನವೆಂದು ಆಯ್ಕೆ ಮಾಡಿದ್ದರು . ಈ ಪಿಕ್ನಿಕ್ ಹೈಲ್ಯಾಂಡ್ ಪಾರ್ಕ್ ಎನ್ನುವ ಊರಿನ Donaldson ಪಾರ್ಕ್ ನಲ್ಲಿ ಏರ್ಪಡಿಸಲಾಗಿತ್ತು . ಇದಕ್ಕೆಲ್ಲ ಅನುಕೂಲವಾಗುವಂತೆ ಆ ದಿನದ ವಾತಾವರಣವೂ ಹಿತಕರವಾಗಿತ್ತು .

ಸೂರ್ಯನ ಕಿರಣ ಸುತ್ತಲೂ ಹಸಿರಿನ ಸಂಭ್ರಮ ತಂಗಾಳಿ ಇಂದ ಒಡಗೂಡಿ ಒಂದು ರೀತಿ ಆಪ್ಯಾಯಮಾನವಾಗಿತ್ತು . ಈ ರೀತಿಯ ಪಿಕ್ನಿಕ್ ಆಯೋಜಿಸಲು ಬಹಳ ತಯಾರಿ ಮಾಡಬೇಕಾಗುತ್ತದೆ . ಮೊದಲು ಪಾರ್ಕ್ ಸಿಬ್ಬಂದಿಯೊಂದಿಗೆ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು ನಿಯೋಜಿತವಾದ ಸ್ಥಳದಲ್ಲೇ ಪಿಕ್ನಿಕ್ ಮಾಡಬೇಕು. ಮತ್ತು ನಿಯಮಿತವಾದ ಟೈಮ್ ನಲ್ಲಿ ಆರಂಭ ಮಾಡಿ ಮುಗಿಸಲೂ ಬೇಕು .ಕನ್ನಡ ಕೂಟದ ಬಾಂಧವರೆಲ್ಲರೂ ಟಿಕೆಟ್ ಖರೀದಿಸಿರಬೇಕು ನಂತರ ಊಟ ಉಪಚಾರ .ಪಾನೀಯ ಮತ್ತು ಆಟಗಳ ನಮೂನೆ ಅಬ್ಬಾ ತುಂಬಾನೇ ಕೆಲಸಗಳಿರುತ್ತದೆ . ಇವೆಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿ ಕೊಟ್ಟ ಅಪೂರ್ವ ತಂಡದ ಕಾರ್ಯಕರ್ತರಿಗೂ ಹಾಗೂ ಸ್ವಯಂಸೇವಕರಿಗೂ ಬಂದವರೆಲ್ಲ ಧನ್ಯವಾದಗಳನ್ನು ಅರ್ಪಿಸಿದರು.

ಬೆಳಿಗ್ಗೆ 11 ಗಂಟೆಗೆ ಒಬ್ಬೊಬ್ಬರಾಗಿ ತಮ್ಮ ವಾಹನದಲ್ಲಿ ಬರತೊಡಗಿದರು , ಎಲ್ಲರ ಉಡುಗೆ ತೊಡುಗೆಗಳೂ ಆಟೋಟಕ್ಕೆ ಅನುಕೂಲವಾದಂತೆ ಬಣ್ಣ ಬಣ್ಣವಾಗಿ ಕಂಗೊಳಿಸುತ್ತಿತ್ತು .

ಸ್ನೇಹಿತರನ್ನೆಲ್ಲ ಒಟ್ಟಾಗಿ ನೋಡಿ ಎಲ್ಲರೂ ಖುಷಿಯಾಗಿದ್ದರು . ಮೀಟ್ ಅಂಡ್ ಗ್ರೀಟ್ ಸಂಭ್ರಮದೊಂದಿಗೆ ಉಪಹಾರದ ತಯಾರಿಯೂ ನಡೆದಿತ್ತು . ಟೇಬಲ್ ಮತ್ತು ಟೇಬಲ್ clothes ಗಳನ್ನೂ ಹಾಕಿ ಊಟದ ಜಾಗದ ಸ್ಥಾಪನೆ ಆಯಿತು. ಇದರೊಂದಿಗೆ ಪುಷ್ಕಳವಾಗಿ ನೀರು ,ಮಜ್ಜಿಗೆ ಮತ್ತು ಪಾನಕದ ಸರಬರಾಜು ನಡೆದಿತ್ತು . ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಎಲ್ಲರಿಗೂ ಅವರದ್ದೇ ನೀರಿನ bottle ತರಲು ಮನವರಿಕೆ ಮಾಡಿಕೊಳ್ಳಲಾಗಿತ್ತು ಆ ನಿಯಮವನ್ನು ಎಲ್ಲರೂ ಪಾಲಿಸಿದರು .

ಇನ್ನೊಂದು ಕಡೆ ಬಾಯಲ್ಲಿ ನೀರೂರಿಸುವ ಬಿಸಿ ಬಿಸಿ ದೋಸೆ ಹಾಕಿ ಕೊಡುವ ಜಾಗವಿತ್ತು ಅಲ್ಲಿ ಜನರ ಜಾತ್ರೆಯೇ ನೆರೆದಿತ್ತು ಪ್ರತಿಯೊಬ್ಬರಿಗೂ ತರಾವರಿ ದೋಸೆ ಮತ್ತು ಪಲ್ಯ , ವಿಧ ವಿಧವಾದ ಚಟ್ನಿಗಳನ್ನು ಸವಿಯುವ ಸದವಕಾಶ ದೊರೆಯಿತು.

12 ಗಂಟೆಗೆ ಸರಿಯಾಗಿ ಊಟದ ಭಾಗವನ್ನು ತೆರೆಯಲಾಯಿತು . ಅಲ್ಲಿ ವೆಜಿಟೇಬಲ್ ಬಿರಿಯಾನಿ , ಪೊಂಗಲ್ , ಮೊಸರೂ ವಡೆ , ರಾಯತ , ಧೋಕ್ಲಾ ಮತ್ತು ಚಟ್ನಿಗಳು ಸಿಹಿಯಾದ ರಸಭರಿತ ಜಾಮೂನುಗಳು ಮತ್ತು ಫಲಭರಿತ ಫ್ರೂಟ್ ಸಲಾಡ್ ತುಂಬಿದ ಪಾತ್ರೆಗಳು ರಾರಾಜಿಸುತ್ತಿದ್ದವು . ಎಲ್ಲರೂ ಈ ಊಟವನ್ನು ಸವಿದರು ಸ್ವಯಂಸೇವಕರು ಬಡಿಸಿ ಎಲ್ಲರನ್ನು ಆದರಿಸಿ ಸತ್ಕಾರವನ್ನು ಮಾಡಿದರು.

ಆ ನಂತರ ಎಲ್ಲರಿಗೂ ಶಕ್ತಿ ತುಂಬಿದ್ದರಿಂದ ಆಟದ ಮೇಲೆ ಗಮನ ಹರಿಯಲಾರಂಭಿಸಿತು ತಮ್ಮದೇ ಗುಂಪುಗಳನ್ನು ಮಾಡಿಕೊಂಡರು . ಮಕ್ಕಳಿಗೆ ಬೇರೆ ಬೇರೆ ಸ್ಪರ್ಧೆಗಳನ್ನೂ ಆಯೋಜಿಸಲಾಗಿತ್ತು. ರನ್ನಿಂಗ್ ರೇಸ್, ಲೆಮನ್ ಆನ್ ದಿ ಸ್ಪೂನ್ ಇತ್ಯಾದಿ ತರಾವರಿ ಆಟಗಳಿದ್ದವು. ಎಲ್ಲೆಡೆ ಉತ್ಸಾಹ ತುಂಬಿತ್ತು . ಮತ್ತೊಂದು ಕಡೆ ದೊಡ್ಡವರ ಆಟೋಟಗಳು ಜೋರಾಗಿ ನಡೆದವು ಗಂಡಸರು ಮತ್ತು ಮಹಿಳೆಯರಿಗೆ ಬೇರೆ ಬೇರೆಯಾಗಿ ರನ್ನಿಂಗ್ ರೇಸ್ ಸ್ಪರ್ಧೆಗಳಿದ್ದವು. ಗೆದ್ದವರೆಲ್ಲ ಸಂತೋಷದಿಂದ ಕುಣಿಯುತ್ತಿದ್ದರು , ಸೋತವರು ಸಪ್ಪೆ ಮೋರೆಮಾಡಿಕೊಂಡಿದ್ದರು .

ಯುವಕರು ಮತ್ತು ಯುವತಿಯರೆಲ್ಲ volley ಬಾಲ್ ಬತ್ತಿತರ ಆಟಗಳನ್ನು ಆಡುತ್ತ , ಓಡುತ್ತಾ ಸಂತಸದಿದ್ದ ಇದ್ದರು.

ಗಂಡಸರು ಕ್ರಿಕೆಟ್ ಬಹಳ ಅದ್ಭುತವಾಗಿ ಆಡಿದರು ಮತ್ತು ತಮ್ಮ ಬಾಲ್ಯ ಜೀವನವನ್ನು ಮೆಲುಕಿ ಆನಂದಿಸಿದರು.

ಮಹಿಳೆಯರು ಕ್ರಿಕೆಟ್ ಆಡಿದರು ಅವರಲ್ಲಿಯೂ ಬಹಳ ಅನುಭವೀ ಪಟುಗಳಿದ್ದರು . ಆಟ ತುಂಬಾ ಚೆನ್ನಾಗಿ ಮನೋರಂಜಕವಾಗಿತ್ತು . ಗೆದ್ದ ತಂಡ ಸಂತೋಷದಿಂದ ಕುಣಿದು ಸಂಭ್ರಮಿಸದರು . ಸೋತವರು ಸ್ವಲ್ಪ ಸಮಯ ಕಂದಿದ್ದರು.

ಮಹಿಳೆಯರು ಇನ್ನೊಂದು ಗುಂಪಿನ ಆಟವಾದ ಥ್ರೋ ಬಾಲ್ ಆಟವನ್ನು ಆಡಿದರು .. ಇದೂ ಸಹ ಅದ್ಭುತವಾಗಿತ್ತು . ಗೆದ್ದ ತಂಡ ತಮ್ಮ ಗೆಲುವನ್ನು ಆನಂದಿಸಿದರು . ಮತ್ತೊಂದು ಕಡೆ ದೊಡ್ಡವರಿಗಾಗಿ ಚೌಕ ಬಾರಾ ಇತ್ಯಾದಿ ಆಟಗಳ ಸ್ಪರ್ಧೆಯನ್ನು ನಡೆಸಲಾಯಿತು.

ಮಕ್ಕಳಿಗೆ ಚೆಸ್ ಗೇಮ್ ಇತ್ತು . ಮೂರು ಗಂಟೆಗಳ ಕಾಲ ಹುರುಪಿನಿಂದ ಎಲ್ಲ ಆಟಗಳೂ ಸುಗಮವಾಗಿ ಸಾಗಿದವು .

ನಂತರ ಕಲ್ಲಂಗಡಿ ಹಣ್ಣಿನ ಸೇವನೆ ಆಯಿತು ಅದು ಬಹಳ ಹಿತವಾಗಿತ್ತು , ಈಗ ಬಿಸಿಲಿನ ಝಳವು ಹೆಚ್ಚಾಗುತ್ತಿತ್ತು ಕೊಂಚ ವಿಶ್ರಾಮವನ್ನು ಎಲ್ಲರೂ ಬಯಸುತ್ತಿದ್ದರು ಮತ್ತೆ ನಿಧಾನವಾಗಿ ವಿಶ್ರಮದೊಂದಿಗೆ ಓಡಾಡುತ್ತಾ ಕೆಲವರು ಫೋಟೋ , ವಿಡಿಯೋ ಮತ್ತು ಡ್ರೋನ್ pictures ತೆಗೆದುಕೊಳ್ಳುವುದರಲ್ಲಿ ನಿರತರಾಗಿದ್ದರು.

ಸಂಜೆಯಾಗುತ್ತಿದ್ದಂತೆ Fathers day ಮತ್ತು Graduation celebration ರುಚಿಕರವಾದ cake ಕಟ್ ಮಾಡುವುದರ ಮೂಲಕ ಆಚರಿಸಲಾಯಿತು .
ವಿಜೇತರಿಗೆಲ್ಲ prize distribution ಮಾಡಲಾಯಿತು . ಅದನ್ನು ನೋಡಿ ಎಲ್ಲರೂ ಆನಂದಿಸಿ ಚಪ್ಪಾಳೆಯನ್ನು ತಟ್ಟಿದರು.
ಈಗ ಎಲ್ಲರೂ ವಾಪಸ್ ತೆರಳುವ ಸಮಯ ಬಂದಾಯಿತು. ತುಂಬಾ ಸ್ವಚ್ಛಗೊಳಿಸುವ ಕೆಲಸಗಳಿದ್ದವು ಇದ್ದವು . ಇದೆಲ್ಲವನ್ನು ಯುವಕ ಸ್ವಯಂಸೇವಕರು ಚುರುಕಾಗಿ ಮಾಡಿದರು.

ಈ ವರ್ಷದ ನಮ್ಮ ಬೃಂದಾವನ ವನವಿಹಾರ ಯಶಸ್ವಿಯಾಗಿ ನಡೆಯಿತು.
ಅಪೂರ್ವ ತಂಡಕ್ಕೆ ಕನ್ನಡ ಬಾಂಧವರೆಲ್ಲರೂ ಹೃತ್ಪೂರ್ವಕ ವಂದನೆಗಳನ್ನು ಮತ್ತು ಧನ್ಯವಾದಗಳನ್ನು ಅರ್ಪಿಸಿದರು.

ಲಕ್ಷ್ಮಿ ಕೊಲಾಲ್.



# ನ್ಯೂಯಾರ್ಕ್ ಸುವರ್ಣ ಮಹೋತ್ಸವ

**ನಾಗಶ್ರೀ ಬದರಿ,** ನ್ಯೂಜೆರ್ಸಿ

ಬೃಂದಾವನದ  ಮೂಲ ಕನ್ನಡ ಕೂಟವಾದ ನ್ಯೂಯಾರ್ಕ್ ಕನ್ನಡ ಕೂಟದ 50 ವರ್ಷಗಳ ವಿಜೃಂಭಣೆಯ ಸಂಭ್ರಮಾಚರಣೆ ಎಲ್ಲ ಕನ್ನಡಿಗರ ಮನೆ ಸೂರಿಗೊಂಡಿತು. ಕವಿ ಶ್ರೀ BR ಲಕ್ಷ್ಮಣ್ ರಾವ್ ಹಾಗು ಹಿರಿಯ ಸ್ವಾಮಿಗಳಿಂದ ಉದ್ಘಾಟನೆಗೊಂಡ ಕಾರ್ಯಕ್ರಮ , ಸುಂದರವಾದ ಸಜ್ಜಿಕೆಯಲ್ಲಿ ವಿವಿಧ ಕಾರ್ಯಕ್ರಮಗಳು ಮನ ಸೂರೆಗೊಂಡಿತು. ಬೃಂದಾವನದ ಚಿಣ್ಣರ ನಾಟಕ ಕಾರ್ಯಕ್ರಮ "ಅಪ್ಪಯ್ಯ ಕಳೆದು ಹೋಗಿದ್ದಾನೆ" ಹಾಗು ನೃತ್ಯ ರೂಪಕ ಮನೆಸೂರೆಗೊಂಡಿತು.

---ಸುವರ್ಣ ಮಹೋತ್ಸವದಲ್ಲಿ ಬೃಂದಾವನ --

ನ್ಯೂಯಾರ್ಕ್ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಲು ಬೃಂದಾವನ ಕನ್ನಡ ಕೂಟಕ್ಕೆ ಆಮಂತ್ರಣ ಬಂದಾಗ ನಾವು ಮಕ್ಕಳೆನ್ನೆಲ್ಲಾ ಸೇರಿಸಿ ನಾಟಕ ಮಾಡಿಸುವುದು ಎಂದು ನಿರ್ಧಾರ ಮಾಡಿಕೊಂಡೆವು.

ವಿಜಯ್ ತೆಂಡೂಲ್ಕರ್ ಅವರ ಮರಾಠಿ ನಾಟಕ "ಅಪ್ಪಯ್ಯ ಕಳೆದು ಹೋಗಿದ್ದಾರೆ
"ಆಯ್ಕೆ ಮಾಡಲಾಯಿತು .
ಈ ನಾಟಕದ ನಿರ್ದೇಶಕರು ಉಮಾ ಮೂರ್ತಿ ಅವರು audition ಪ್ರಾರಂಭಿಸಿ,ಪಾತ್ರ ನಿಯೋಜಿಸಿ ಸಂಭಾಷಣೆಗಳನ್ನು  ನೀಡಿ ಪ್ರತಿ ರಾತ್ರಿ ಸೋಮವಾರದಿಂದ -ಶುಕ್ರವಾರದವರಗೆ zoom callನಲ್ಲಿ  ಅಭ್ಯಾಸ ಮಾಡಿಸುತ್ತಿದ್ದರು .

ಒಂದೆಡೆ ಸೇರಿ ನಾಟಕ ಮಾಡಬೇಕು ಅಂದಾಗ  ಮಕ್ಕಳಿಗಾದ ಸಂತೋಷ ಅಷ್ಟಿಷ್ಟಲ್ಲ .ಅದು ಅವರಿಗೆ ಪ್ಲೇ ಡೇಟ್ ಆಗುತಿತ್ತು. ಶಿಕ್ಷಕಿಯರು ಮತ್ತು ಪೋಷಕರ ಕೈ ಚಳಕದಿಂದ ರಂಗಪರಿಕಗಳು ಸಿದ್ಧವಾಯಿತು .
ಮಳೆ,ಗಾಳಿ ,ಚಳಿ,ಗುಡುಗು ,ಸಿಡಿಲುಗಳು ಆರ್ಭಟ ಜೋರಾಗಿದ್ದರು ಯಾವುದೇ ಲೆಕ್ಕಿಸದೇ ನ್ಯೂಯೋರ್ಕ್ ಗೇ ಹೊರಟೆವು . ಇಂತಹ ವಾತಾವರಣಲ್ಲೂ ಮಕ್ಕಳ ಉತ್ಸಹ ಕುಗ್ಗಲಿಲ್ಲ. ನಾಟಕ ಆರಂಭವಾಯಿತು . ಪ್ರತಿಭಾವಂತರ ಕೈಯಲ್ಲಿ ಅರಳಿದ
ರಂಗಪರಿಕರಗಳು ಜೀವ ತುಂಬಿ ಮಾತನಾಡಿದವು . ಮಕ್ಕಳ ನಿರೂಪಣೆ ,ನಟನೆ,ಅಭಿನಯ ,ಕನ್ನಡ ಭಾಷೆಯ ಸ್ಪಷ್ಟತೆ ಪ್ರೇಕ್ಷಕರ ಮನಗೆದ್ದಿತು.
ಮಕ್ಕಳ ನಾಟಕ ಅತ್ಯತ್ತಮವಾಗಿ  ಮೂಡಿಬಂತು ಎಂದು ಮೆಚ್ಚುಗೆಯನ್ನು  ಚಪ್ಪಾಳೆಯ ಮೂಲಕ ಜನ ವ್ಯಕ್ತಪಡಿಸಿದರು .
ಶಿಕ್ಷಕರು ,ನಿರ್ದೇಶಕರು ,ಪೋಷಕರು ಹಾಗು ಮಕ್ಕಳು ತಾವು ಪಟ್ಟ ಶ್ರಮ ಸಾರ್ಥಕವಾಯಿತೆಂದುಕೊಂಡರು.

******

ಆ ಕಾರ್ಯಕ್ರಮದ ವಿಶೇಷವಂದರೆ ಬಹು ವಿಧ ಖಾದ್ಯಗಳ ಭೋಜನ ಹಾಗು ಉಪಹಾರ, ಕುಂಭ ದ್ರೋಣ ಮಳೆಯಲ್ಲಿ  ಒಂದು ವಿಶೇಷ ರುಚಿಯ ಅನುಭವ, ನೂರಾರು ಜನರ ನಡುವೆ ನಡೆದ ವರ್ಣ ರಂಜಿತ ಮೆರವಣಿಗೆ ಕಾರ್ಯಕ್ರಮವಂತೂ ಕನ್ನಡ ರಾಜ್ಯದ ವಿವಿಧ  ಕಲೆಗಳು , ಕಲಾವಿದರು , ಜಿಲ್ಲಾ ಪ್ರಾಂತ್ಯಗಳ ವಿಶೇಷ ವೇಷ ಭೂಷಗಳು ಮನ  ಸೂರೆ ಗೊಂಡಿತು. ಕರ್ನಾಟಕದ ಹೆಸರಾಂತ ಸಂಗೀತ ನಿರ್ದೇಶಕ ಹಾಗು ಗಾಯಕಿ ಗುರು ಕಿರಣ್ ಹಾಗು ಅನುರಾಧ ಭಟ್ ಅವರ ಸಂಗೀತ ಸಂಜೆ ಕಾರ್ಯಕ್ರಮ ಹಾಗು ಕನ್ನಡದ ಹೆಸರಾಂತ ಗಾಯಕ ಶ್ರೀ ವಿಜಯ ಪ್ರಕಾಶ್ ಅವರ ತಂಡದವರ ಮ್ಯೂಸಿಕಲ್ ನೈಟ್ ಕಾರ್ಯಕ್ರಮದ ವಿಶೇಷಗಳು. 50 ವರ್ಷಗಳ ಸುವರ್ಣ ಸಾಧನೆಯ ನ್ಯೂಯಾರ್ಕ್ ಕನ್ನಡ ಕೂಟ, ಮರೆಯ ಲಾರದ ಅನುಭವಗಳನ್ನು ನೀಡಿತು.




ಕನ್ನಡ ಕೂಟ ನ್ಯೂಯಾರ್ಕ್






ಸುಮಧುರ ಸ್ನೇಹ ಸಮ್ಮಿಲನ ನಮ್ಮೀ
ಬೃಂದಾವನ
KARNATAKA CULTURAL ORGANIZATION BRINDAVANA (KCOB)
NEW JERSEY, USA
ಕನ್ನಡವೇ ಸತ್ಯ ಕನ್ನಡವೇ ನಿತ್ಯ





# ಕವಿ-ಚಿತ್ರಣ

ಗ್ರೀಷ್ಮ ಗಾಯನ



# ಚಿತ್ರ ದರ್ಶಿ : BR ಲಕ್ಷ್ಮಣ ರಾವ್

**ಸಂಪಾದಕ ತಂಡ,** ನ್ಯೂಜೆರ್ಸಿ



















# ವ್ಯಕ್ತಿ-ಶಕ್ತಿ

ಗ್ರೀಷ್ಮ ಗಾಯನ



# ಬನ್ನಂಜೆ ಎಂಬ (ಅಪ್ಪನೆಂಬ)ಬೃಹದಾರಣ್ಯಕ!

**ವೀಣಾ ಬನ್ನಂಜೆ,** ನ್ಯೂಜೆರ್ಸಿ

ಉಡುಪಿಯ ಪಡುಮುನ್ನೂರು ನಾರಾಯಣಾಚಾರ್ಯ ವಂಶದ ಕುಡಿ ಬನ್ನಂಜೆ ಗೋವಿಂದಾಚಾರ್ಯ. ಈ ವಂಶದ ಬೆಳವಣಿಗೆಯೇ ಒಂದು ವಿಶೇಷ ಕಥೆ.

ಅಡುಗೆ ಭಟ್ಟರ ಮನೆತನ, ಆಚಾರ್ಯರಾದದ್ದು ಸ್ವಂತ ಪರಿಶ್ರಮದಿಂದ. ಅನಂತ ಭಟ್ಟರಾಗಿದ್ದ ಅಜ್ಜ ಅಡುಗೆ ಭಟ್ಟರಿಂದ  ಆಚಾರ್ಯರಾದರು. ಅಜ್ಜಿ ಪದ್ಮಾವತಿ ಕೂಡಾ ಸಂಸ್ಕೃತ ಪಂಡಿತೆ. ಅಂಥ ಪರಿಶ್ರಮ ದಾಂಪತ್ಯದ ಫಲ ನಾರಾಯಣ ಆಚಾರ್ಯರು.

ಈ ನಾರಾಯಣ ಮದುವೆ ಆದ ಮರುದಿನ ಮನೆ ಬಿಟ್ಟರು. ಆಗ ಅವರಿಗೆ ಹದಿನಾಲ್ಕು. ಧಾರವಾಡದ ವಿರೂಪಾಕ್ಷ ಶಾಸ್ತ್ರಿಗಳಲ್ಲಿ ತರ್ಕಶಾಸ್ತ್ರ ಕಲಿತು ಮರಳಿದ್ದು ಇಪ್ಪತ್ತಾರಕ್ಕೆ. ಹೊಚ್ಚಹೊಸ ಮದುವೆ ಆದ ಹೆಂಡತಿ ಸತ್ಯಭಾಮೆ ಗೆ ಗಂಡನ ಹನ್ನೆರಡು ವರ್ಷಗಳ ಅಜ್ಞಾತವಾಸ. ಹಾಗೆ ಬಂದವರು ಪಂಡಿತ ಪಡುಮುನ್ನೂರು ನಾರಾಯಣ ಆಚಾರ್ಯರಾಗಿ ಬೆಳೆದರು.

ಅಷ್ಟಮಠದ ಸ್ವಾಮೀಜಿಗಳಿಗೆ ಆಸ್ಥಾನ ವಿದ್ವಾಂಸ. ಮೈಸೂರಿನ ಅರಸರು ಅರಮನೆಗೆ ವಿದ್ವಾಂಸರಾಗಿ ಬನ್ನಿರೆಂದರೆ ಕೃಷ್ಣನನ್ನು ಬಿಟ್ಟು ಬರುವುದಿಲ್ಲ ಎಂದು ಅರಸರ ಗೌರವ ನಿರಾಕರಿಸಿದ ಕೃಷ್ಣ ಭಕ್ತ. ತನಗೆ ದಾನ ಮಾಡಲು ಯಾರಾದರೂ ಬಂದರೆ ನನಗಿಂತ ಅವಶ್ಯಕ ಇರುವವರಿಗೆ ಕೊಡಿ ಎಂದು ಸೌಮ್ಯವಾಗಿ ನಿರಾಕರಿಸುತ್ತಿದ್ದ ನಿಸ್ಪೃಹಿ.

ವ್ಯವಹಾರ ನಿಷ್ಠುರಿ. ತನ್ನ ಹೆಸರಲ್ಲಿ ಹಣ ಕೇಳಿದ ಸಂಬಂಧಿಯನ್ನು ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟು ತನಗೂ ಆ ವ್ಯವಹಾರಕ್ಕೂ ಸಂಬಂಧ ಇಲ್ಲ ಎಂದ ಕಠೋರಿ. ಹೆಂಡತಿಯನ್ನು ಹೃದಯವಂತಿಕೆಯಿಂದ ರೋಗ ದಾಟುವಂತೆ ಮಾಡಿದ ಕರುಣಾಮಯಿ. ಸ್ವಂತ ಮಗ ಹಣ ತೆಗೆದರೆ ಪುಸ್ತಕ ಕೊಳ್ಳುತ್ತಾನೆ ಎಂಬುದನ್ನು ತಿಳಿದು ಸುಮ್ಮನಾದ ವ್ಯವಹಾರ ನಿಪುಣ. ಚಟ ತೀರಿಸಲು ಕಳ್ಳತನ ಮಾಡಿದ ಹುಡುಗನನ್ನು ಹಾಳಾಗಿ ಹೋಗುತ್ತಿ ಎಂದು ಶಪಿಸಿದ ಋಷಿ.

ತನ್ನ ಎಪ್ಪತ್ತರ ದಶಕದ ವಯದಲ್ಲಿ ತಾನೇ ಬಾವಿಗಿಳಿದು ಕಸ ತೆಗೆದ ಧೀರ.ದೇವರಿಗೆ ನೀರು ತರುವಾಗ ಬಿದ್ದು ಕಾಲು ಮುರಿದುಕೊಂಡರೆ, ಚಿಕಿತ್ಸೆಗೆ ಒಪ್ಪದೆ, ತಾನು ಮಾಡಿದ ಯಾವುದೋ ತಪ್ಪಿಗೆ ಈ ಶಿಕ್ಷೆ ಆಗಿದೆ ಅದನ್ನು ಅನುಭವಿಸಿಯೇ ತೀರಬೇಕು ಎಂದ ಹಠವಾದಿ. ಇಂತಹ ಹಲವು ವಿಶೇಷಗಳ ಆಜಾನುಬಾಹು, ಸಂಸ್ಕೃತ ವಿದ್ವಾಂಸ,ತರ್ಕಕೇಸರಿ, ಪಡುಮುನ್ನೂರು ನಾರಾಯಣ ಆಚಾರ್ಯರು.

ಅವರು ಹೆತ್ತ ಹಲವು ಮಕ್ಕಳಲ್ಲಿ ಉಳಿದವರು ಇಬ್ಬರು ರಾಮ ಮತ್ತು ಗೋವಿಂದ. ಅಜ್ಜ ಸಂಪಾದಿಸಿದ ಆಚಾರ್ಯತ್ವ ಅಪ್ಪನಿಂದ ಬೆಳೆಯಿತು.

ಇಂತಹ ಮನೆಯಲ್ಲಿ ಗೋವಿಂದ ಹುಟ್ಟುವ ವೇಳೆಗೆ ನಾರಾಯಣ ಆಚಾರ್ಯರು ಪಡುಮುನ್ನೂರಿನಿಂದ ಬನ್ನಂಜೆಗೆ ಬಂದರು. ನಾಲ್ಕರ ಮಗು ನಸುಕಿನಲ್ಲಿ ಉಷಾಕಾಲದಲ್ಲಿ ಕನಸು ಕಾಣುತ್ತಿತ್ತು. ಮನೆಯ ಪಡಸಾಲೆಯ ಗೋಡೆಗೊಂದು ಪರದೆಯಂಥ ತಡೆ, ಅದರ ಮುಂದೆ ನೀಲವರ್ಣದ ಬಾಲಕೃಷ್ಣ. ಅಮ್ಮ ಕಥೆಯಲ್ಲಿ ಹೇಳಿದ್ದ ನವಿಲುಗರಿ ಮುಡಿಯಲ್ಲಿ . ಕೃಷ್ಣನ ಕೈಯಲ್ಲಿ ಒಂದು ಗುಲಾಬಿಯ ಗಿಡ, ಕೃಷ್ಣ ಹೂವು ತೋರಿ ಮುಳ್ಳನ್ನೂ ಕಾಣಿಸುತ್ತಾನೆ.  ನಿದ್ದೆ ತಿಳಿದೆಬ್ಬಿಸುವ ಹೊತ್ತು-ಅಮ್ಮ, 'ಶ್ರೀ ಹರಿ ಸೇವೆಯ ಧ್ಯಾನದೊಳಿದ್ದೆ ಏತಕೆ ಎಬ್ಬಿಸಿದೆ' ಎಂದು ಹಾಡುತ್ತಿದ್ದಳು. ಹುಡುಗ "ಅಮ್ಮ, ಕೃಷ್ಣ...ಕೃಷ್ಣ" ಎಂದ. ಅಮ್ಮ ಕಣ್ಣೆಟ್ಟು ಹುಡುಕುವಾಗ ಕೃಷ್ಣ ಹುಡುಗನ ಕಣ್ಣಿಗೂ ಮರೆಯಾದ. ಅಮ್ಮನಿಗೆ ಹೇಳಬಾರದಿತ್ತು ಎಂದು ಹುಡುಗ ಪರಿತಪಿಸಿದ.

ಅಮ್ಮನಿಗೆ ಹುಡುಗ ನಿತ್ಯ  ಸಂಜೆಯ ಒಳಗೆ ಮನೆ ಸೇರಬೇಕು. ಹುಡುಗನಿಗೆ ಅಮ್ಮನ ಪ್ರೀತಿ ಭಯವನ್ನು ಬೆಳೆಸಿತು. ಕತ್ತಲಾದರೆ ಮುಸುಕು, ಮುಸುಕು, ಕಿಟಕಿಗೆ ಬಾಗಿಲು. ಹುಡುಗ ಪುಕ್ಕನಾದ. ಒಂದು ದಿನ ಅದನ್ನು ದಾಟಲೆಂದೇ ಹೊರಬಿದ್ದ

ಅಪ್ಪ ನಾರಾಯಣ ಆಚಾರ್ಯರು ಏನೂ ಕಲಿಸಲಿಲ್ಲ. ಆದರೆ ಜೊತೆ ಇದ್ದ ದೊಡ್ಡಪ್ಪ ಹುಡುಗನಿಗೆ ನಾಲ್ಕು ಆಗುವುದರೊಳಗೆ ಹಲವನ್ನು ಕಲಿಸಿದರು. ಬಾಲ್ಯದಿಂದಲೇ ಹುಡುಗನ ನಾಲಿಗೆ ತುಂಬ ಸಂಸ್ಕೃತ. ಆದಿ ಉಡುಪಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ. ಅಲ್ಲಿ ಗಣಿತದಲ್ಲಿ ಗೋವಿಂದನ ಅಸಾಧಾರಣ ಪ್ರತಿಭೆ."ಬದುಕುವುದಕ್ಕಾಗಿ ತಿನ್ನುವುದೋ ತಿನ್ನುವುದಕ್ಕಾಗಿ ಬದುಕುವುದೋ?" ಎಂದು ಶಾಲೆಯಲ್ಲಿ ಶಿಕ್ಷಕರ ಪ್ರಶ್ನೆಗೆ "ತಿನ್ನುವುದಕ್ಕಾಗಿ ಬದುಕುವುದು" ಎಂಬ ವಿಕ್ಷಿಪ್ತ ಉತ್ತರ ಕೊಟ್ಟ ನಿಜ ಕರ್ಮಸಿದ್ಧಾಂತಿ. ತನ್ನ ಕೈಯಲ್ಲಿ ಏನೋ ಒಂದು ಶಕ್ತಿ ಪ್ರವಹಿಸುತ್ತದೆ ಎಂಬ ಭಾವ ಚಿಕ್ಕಂದಿನಿಂದಲೂ. ಅದಕ್ಕೆ ಸದಾ ಕೈಗಳನ್ನು ಮುಷ್ಟಿಮಾಡಿ ಮುಚ್ಚಿಕೊಳ್ಳುತ್ತಿದ್ದ. ತೆರೆದರೆ ಶಕ್ತಿ ಹರಿದು ಹೋಗುತ್ತದೆ ಎಂಬ ಭಯ.

ಮುಂದೆ ಸಂಸ್ಕೃತ ಶಾಲೆಯಲ್ಲಿ ಪ್ರೌಢ ಶಿಕ್ಷಣ. ಅಲ್ಲಿ ಹತ್ತನೆಯ ತರಗತಿಯಲ್ಲಿ ಮೂರು ಬಾರಿ ಸಂಸ್ಕೃತದಲ್ಲಿ ಪಾಸು ಆದರೆ ಮುಂದಿನ ತರಗತಿ ಪ್ರವೇಶಕ್ಕೆ ಬೇಕಾದ ಅಂಕಗಳಿಲ್ಲ. ಅವನಿಂದ ಪಾಠ ಕೇಳಿ ಬರೆದವರು ಉತ್ತೀರ್ಣರಾಗಿ ಮುಂದೆ ಗೋವಿಂದ ಮಾತ್ರ ಹಿಂದೆ. ಅನುತ್ತೀರ್ಣನಲ್ಲ ಆದರೆ ಶೈಕ್ಷಣಿಕ ಮುಂದುವರಿಕೆಗೆ ಅಂಕ ಸಾಲದು. "ಬಹುಶಃ ಗೋವಿಂದ ಬರೆಯುವ ಸಂಸ್ಕೃತ ಮೌಲ್ಯಮಾಪಕರಿಗೆ ತಿಳಿಯದು" ಎಂಬ ಮಾತು ಆಗ ಪ್ರಸಿದ್ಧ ಆಯಿತು. ಹುಡುಗ "ಇನ್ನೆಂದೂ ಶಾಲೆಗೆ ಹೋಗುವುದಿಲ್ಲ, ದೊಡ್ಡ ದೊಡ್ಡ ಶಾಲೆಗೆ ಹೋದವರೆಲ್ಲ ನನ್ನ ಬಳಿ ಬಂದು ಪಾಠ ಕೇಳುವಂತಾಗಬೇಕು" ಎಂದು ಹಠ ತೊಟ್ಟ. ಅಲ್ಲಿಂದ ಸ್ವಾಧ್ಯಾಯ ಆರಂಭಿಸಿದ. ಓದಿನಲ್ಲಿ ಮುಳುಗಿ ಹೋದ.

ಆ ಕಾಲಕ್ಕೆ ಪಲಿಮಾರು ಮಠಾಧೀಶ ವಿದ್ಯಾಮಾನ್ಯ ತೀರ್ಥರ ಶಿಷ್ಯನಾದ. ತಲೆಯಲ್ಲಿ ಜುಟ್ಟು, ಬೈರಾಸಿನ ಕಚ್ಚೆ, ಉತ್ತರೀಯ. ಭಾರೀ ಮಡಿ ಮನೆತನ, ಸಂಪ್ರದಾಯ. ಎಲ್ಲದರ ಒಳಗೆ ವೇದಾಂತ ಓದಿದ. ಎಷ್ಟೋ ಪಾಠ ಗುರುಗಳು ಹೇಳುವ ಮೊದಲೇ ಗೋವಿಂದ ಅವರಿಗೆ ಹೇಳುತ್ತಿದ್ದ. ಹುಡುಗನ ಒಳಗಿನ ಪ್ರತಿಭೆ ತೀರ್ಥರ ಅರಿವಿಗೆ ಬಂದಿತ್ತು. ಅವರು ಮೌನಗರ್ಭದಲ್ಲಿ ಅವನನ್ನು ಬೆಳೆಸುತ್ತಿದ್ದರು. ಗೋವಿಂದ ವಿದ್ಯಾಮಾನ್ಯರ ಪರಮಪ್ರಿಯ ಶಿಷ್ಯನಾದ. ಕೌಮಾರ್ಯದಲ್ಲೇ ತಂತ್ರಸಾರ ಸಂಗ್ರಹ ಅನುವಾದಿಸಿದರೆ, ಬಾಣಭಟ್ಟನ ಕಾದಂಬರಿಯೂ ಕನ್ನಡಕ್ಕೆ ಬಂದಳು. ಆ ಎಳೆವಯಸ್ಸಿನಲ್ಲೇ ಸರ್ವಮೂಲ ಗ್ರಂಥ ಸಂಪಾದಿಸಿದ ವಟು. ಹೀಗೆ ಸಂಸ್ಕೃತ ವೇದಾಂತ ಮತ್ತು ಸಾಹಿತ್ಯ ಎರಡನ್ನೂ ಎಡಬಲದಂತೆ ಈಸಿ ಬೆಳೆಯ ತೊಡಗಿದ ಗೋವಿಂದ.

ಹೊರಗಿನ ವೇಷ ಒಳಗಿನ ನಟನೆ ಇವು ಮಠದ ವಾತಾವರಣದಲ್ಲಿ ಕಾಣಿಸಿದವು. ಹುಡುಗ ಜುಗುಪ್ಸೆಗೊಂಡ. ನುಡಿಗೂ ನಡೆಗೂ ಭೇದ ಕೂಡದೆನಿಸಿತು. ಹೊರಗೆ ಕಾಣುವವ ಹೇಗಿದ್ದರೂ ಒಳಗಿನದು ಸತ್ಯ ಇರಬೇಕು. ಹೊರಗಿನದಕ್ಕೆ ಬೆಲೆ ಕೊಡಕೂಡದು ಒಳಗಿನದೇ ನಿಜ. ಹೊರಗೆ ಹೇಗಿದ್ದರೂ ಮುಖ್ಯ ಅಲ್ಲ ಒಳಗಿನ ಬೆಳಕು ನಿತ್ಯ. ಹೀಗೆ ಒಂದು ವಿಪರೀತ ಸತ್ಯ ಕಣ್ಣಿಗೆ ಹೊಡೆಯುತ್ತಿತ್ತು. ಹುಡುಗ ಜನರಿಗೆ ಇದರ ಅರಿವು ಮುಟ್ಟಿಸಬೇಕು ಎಂದು ಕ್ರಾಂತಿಕಾರಿ ಆದ. ತೋರ್ಪಡಿಕೆಯ ನಾಟಕ ಸಾಕು ನಿಜವಾದ ಒಳಗನ್ನು ತೊಳೆಯಿರಿ. ಒಳಗೆ ಪರಿಶುದ್ಧರಾಗಿ. ಹೊರಗಿನ ಪೋಷಾಕಿಗೆ ಬೆಲೆ ಕೊಡಬೇಡಿ ಎಂದು ತೋರಲು, ಮಡಿವಂತ ಬಟ್ಟೆ ಕಳಚಿದ. ಜುಟ್ಟು ಕತ್ತರಿಸಿ ಕ್ರಾಪ್ ಬಿಟ್ಟ. ಫ್ರೆಂಚ್ ಗಡ್ಡಕ್ಕೆ ದೋತ್ರ ಶರ್ಟಿನ ಕಾಂಬಿನೇಶನ್. ಬಾಯಿಯಲ್ಲಿ ಸಿಗರೇಟು, ಹೋಟೆಲಿನಲ್ಲಿ ಕಾಫಿ. ಯಾವುದನ್ನೂ ಗೋವಿಂದ ಕದ್ದುಮುಚ್ಚಿ ಮಾಡಲಿಲ್ಲ ಎಲ್ಲ ಬಿಡುಬೀಸು.ಆಚಾರ್ಯರ ಮನೆಯ ಸಂಸ್ಕೃತ ವಿದ್ವಾಂಸರ ಮಗ ಹೀಗಾದ ಎಂದು ಸಮಾಜ ಆಡುತ್ತಿತ್ತು. ಹುಲಿಯ ಹೊಟ್ಟೆಯಲ್ಲಿ ನರಿ ಹುಟ್ಟಿತು ಎಂಬ ಕೀಟಳೆಯ ಮಾತುಗಳೂ ಹುಟ್ಟಿದವು.

ಪಂಡಿತ ನಾರಾಯಣ ಆಚಾರ್ಯರಿಗೆ ಒಳಗಣ್ಣು ಇತ್ತು. ಹುಡುಗನ ಒಳಗೆ ದೊಡ್ಡದು ಬೆಳೆಯುತ್ತಿದೆ ನೋಡಿದರು. ಹುಡುಗನಿಗೆ ಮೊದಲಿಂದ ಹೇಳಿದ್ದು ಒಂದೇ ಮಾತು, " ನಿನಗೆ ಏನು ಬೇಕು ಹಾಗೆ ಬೆಳೆ, ನಾನು ಸಂಸ್ಕೃತ ಓದಿದೆ ಎಂದು ನೀನು ಓದಬೇಡ. ನಿನಗೆ ಬೇಕಾದರೆ ಇಂಗ್ಲಿಷ್ ಓದು. ಯಾರನ್ನೂ ಪ್ರಶ್ನೆ ಕೇಳಬೇಡ.... ಪ್ರಶ್ನೆ ನಿನ್ನಲ್ಲಿ ಹುಟ್ಟಿದೆ ಆದ್ದರಿಂದ ಉತ್ತರವೂ ನಿನ್ನಲ್ಲೇ ಇದೆ ಹುಡುಕು." ಹುಡುಗ ಅಪ್ಪನ ಮಾತಿನ ಸೂತ್ರಾರ್ಥ ತಿಳಿದ. ಎಂದೂ ಸೂತ್ರ ತಪ್ಪಲಿಲ್ಲ. ಹಾಗೆಂದು ಹೊರಗಿನ ಅರಿವೆಗೆ ಬೆಲೆ ಕೊಡುವ ನಾಟಕ ಸಾಕು ಒಳಗಿನ ಅರಿವಿಗೆ ಬೆಲೆ ಕೊಡಿ ಎಂಬುದನ್ನು ಸೆಡ್ಡು ಹೊಡೆದು ಸವಾಲು ನೀಡಿದ. ಅಣ್ಣ ಬನ್ನಂಜೆ ರಾಮಾಚಾರ್ಯರಿಗೂ ತಮ್ಮನ ಬಗ್ಗೆ ಭಾರೀ ಭರವಸೆ. ತಾನು ಸಂಪಾದಿಸಿದ ಪತ್ರಿಕೆಗೆ ಲೇಖನ ಕೊಡುವಂತೆ ಆದೇಶಿಸಿದರು. ಈ ಒತ್ತಾಯ ಇಲ್ಲದೇ ಇವನು ಬರೆಯಲಾರ ಎಂದು ಅಣ್ಣನಿಗೆ ಗೊತ್ತಿತ್ತು. ರಾತ್ರಿ ಬೆಳಗಾಗುವುದರೊಳಗೆ ಲೇಖನ ಸಿದ್ಧ ಮಾಡಲೇಬೇಕು ಹಾಗಿತ್ತು ಅಣ್ಣನ ಒತ್ತಾಯ. ಹದಿನೆಂಟರ ಹುಡುಗನ ವೇದಾಂತದ ಬರೆಹ ಕೇವಲ ಉಡುಪಿಯನ್ನು ಮುಟ್ಟಲಿಲ್ಲ, ಹುಡುಗನ ವಿಸ್ತಾರ ರಾಜ್ಯದಾದ್ಯಂತ ಬೆಳೆಯಿತು. ಎಷ್ಟೆಂದರೆ ಆ ಕಾಲಕ್ಕೆ ಮುಖ್ಯಮಂತ್ರಿ ಆಗಿದ್ದ ಕೆಂಗಲ್ ಹನುಮಂತಯ್ಯನವರೇ ಸ್ವತಃ ಅಣ್ಣ ಬನ್ನಂಜೆ ರಾಮಾಚಾರ್ಯರಿಗೆ ಪತ್ರ ಬರೆದು ಹುಡುಗ ಯಾರೆಂದು,ಭೆಟ್ಟಿಯಾಗ ಬೇಕೆಂದು ವಿಚಾರಿಸಿದರು. ಹಾಗೆ ಕೆಂಗಲ್ ಹನುಮಂತಯ್ಯನವರು ಕರೆಸಿಕೊಂಡರು ಕೂಡ.

ಭಾಷಣಕ್ಕೆ ಬನ್ನಿ ಎಂದಾಗಲೂ ನನಗಿಂತ ಗೋವಿಂದ ಚೆನ್ನಾಗಿ ಮಾತಾಡುತ್ತಾನೆ ಎಂದು ಅವನನ್ನೇ ಕರೆಯುವಂತೆ ಹೇಳಿದ ಅಣ್ಣ. ಹೀಗೆ ಬಾಲಪಾಠ ಮಾಡಿಸಿದ ದೊಡ್ಡಪ್ಪ, ಸ್ವತಂತ್ರವಾಗಿ ಬೆಳೆಯಲು ಬಿಟ್ಟು ಪರಮ ಬಂಧನವೊಂದು ಸೆಳೆಯುವಂತೆ ಮಾಡಿದ ಅಪ್ಪ, ಬೆಳವಣಿಗೆಗೆ ಪೋಷಕನಾದ ಅಣ್ಣ– ಎಲ್ಲವೂ ಒದಗಿ ಬಂದಿತ್ತು ಗೋವಿಂದ ಕುಟುಂಬದಲ್ಲಿ.

ಇವೆಲ್ಲದರ ಜೊತೆಗೆ ಶಿಖರಪ್ರಾಯವಾಗಿ ಗೋವಿಂದನ ಬೆನ್ನಿಗಿದ್ದವರು ರಾಘವೇಂದ್ರ ಸ್ವಾಮೀಜಿ.

ಇತ್ತ ಓದು ಬರೆಹ ಅವಿಶ್ರಾಂತ.  ಸಾಹಿತ್ಯ ಲೋಕಕ್ಕೆ ಅವನು ಸಾಹಿತಿ. ಕವಿತೆ,ನಾಟಕ, ಲೇಖನಗಳು, ಹೀಗೆ ಅಸಾಧಾರಣ ಪ್ರತಿಭಾವಂತ. ಬರೆಹದ ಜೊತೆ ಮಾತನ್ನೂ ನುಡಿಸಲು ಯಾರೋ ಕರೆದರು. ಮಾತಿಗೆ ನಿಂತಾಗ ಓದಿದ್ದು ಮರೆತು ಒಂದೇ ಸಾಲು ಹೇಳಿ ಕುಳಿತ. ಅದು ಅವನ ಪ್ರಥಮ ಭಾಷಣ. ಮಾತಿಗೂ ನೆನಪಿಗೂ ಒಂದು ಎಳೆಯಿದೆ ತಿಳಿದ. ನೆನಪಿನ ಹುಟ್ಟಿನಾಳದಲಿ ಭಗವಂತ ಇರುವುದನ್ನು ಕಂಡ. ಮುಂದೆ ಅಸಾಧಾರಣ ನೆನಪಿಗೇ ಹೆಸರಾದ. ನೆನಪಿಗೆ

ಚೀಟಿಯ ಆಲಂಬನ ಬೇಡಲಿಲ್ಲ ಚಿತ್ತದಲ್ಲಿ ಅವನನ್ನೇ ಕರೆದು ನುಡಿದ. ಅಲ್ಲಿಂದ ನುಡಿದದ್ದು ಮಂತ್ರವಾಯಿತು. ಕೇಳಿದವರು ಮಂತ್ರ ಮುಗ್ಧರಾದರು. ಎಂಭತ್ತರ ದಶಕದಲ್ಲಿ ಅವರ ಮಾತಿಗೆ ಟಿಕೇಟ್ ತೆಗೆದುಕೊಂಡು ಕೇಳುವ ಪ್ರೇಕ್ಷಕರು. ಪ್ರತೀ ನುಡಿಮಂಟಪ ಹೌಸ್ ಫುಲ್. ಎಲ್ಲ ಟಿಕೆಟ್ ಸೋಲ್ಡ್ ಔಟ್. ಹೊರಗಿನ ಆವರಣಗಳಲ್ಲಿ ಕುಳಿತು ಕೇಳುವ ಕೇಳುಗರು.

ಇಷ್ಟರೊಳಗೆ ಬಾಣಭಟ್ಟನ ಕಾದಂಬರಿ ಕನ್ನಡವಾಗಿ ಬೇಂದ್ರೆಯನ್ನೂ ಸೆಳೆದಿತ್ತು. ಆ ಎಳೆವಯಸ್ಸಿನಲ್ಲೇ ಬೇಂದ್ರೆ ಹರಸಿದರು. 'ಬನ್ನಂಜೆ ನಿಮಗೆ ನಿದ್ರೆ ಆರು ತಾಸು, ಕೆಲಸ ಹದಿನೆಂಟು ತಾಸು. ನಿಮ್ಮಿಂದ ಬಹಳ ದೊಡ್ಡ ಕೆಲಸ ಆಗಲಿಕ್ಕಿದೆ.' ಅದು ಏನೆಂದು ತಿಳಿಯದ ದಿನ. ಬೇಂದ್ರೆ ಹಲವು ಕವಿಗೋಷ್ಠಿಗೆ, ಕೆಲವು ಸಾಹಿತ್ಯ ಸಭೆಗೆ ತನ್ನ ಬದಲಿಗೆ ಬನ್ನಂಜೆಯನ್ನು ಕರೆಯಿರಿ ಎಂದು ಸೂಚಿಸಿದ್ದರು. ಮುಂದೆ ಬೇಂದ್ರೆಯವರ ನಾಲ್ಕು ತಂತಿಗೆ ನೀವೇ ವ್ಯಾಖ್ಯಾನ ಬರೆಯಿರಿ ಎಂದು ಬೇಂದ್ರೆ ಹೇಳುವವರೆಗೆ ಅವರ ಬಾಂಧವ್ಯ

ಬಾಲ್ಯದ ದಿನಗಳನ್ನು ಎಲ್ಲ ಸ್ವಾಮೀಜಿಗಳ ಜೊತೆ ಕಳೆದ ಒಡನಾಟ. ಅವರ ಬದುಕು, ಅವರು ತೋರಿದ ಅನುಗ್ರಹ ಸಕಲವೂ ಬನ್ನಂಜೆ ಬೆನ್ನಿಗಿತ್ತು. ಹಲವು ಅವಧೂತ ಸ್ವಾಮಿಗಳೂ ಹರಸಿದ್ದರು. ಮಠದೊಳಗಿದ್ದೂ ಹೊರಗುಳಿದ, ಹೊರಗಿದ್ದಾಗಲೂ ವೇದಾಂತದ ಒಳಗಿದ್ದ.

ಮಾತು ಅಪೂರ್ವ ಇತ್ತು. ವಿಷಯಕ್ಕೆ ಸೀಮೆ ಇರಲಿಲ್ಲ. ಧರ್ಮ, ಜಾತಿ ಭೇದ ಇರಲಿಲ್ಲ. ಕ್ರೈಸ್ತ ಇಸ್ಲಾಂ ಹಿಂದೂ ಧರ್ಮೀಯರೆಲ್ಲರ ಸಭೆಗೂ ಇವರೇ ಅಧ್ಯಕ್ಷ, ಇವರದೇ ಕೊನೆಯ ಮಾತು. ಇವರಾಡಿದ್ದು ಎಲ್ಲರಿಗೂ ತೀರ್ಮಾನ. ಇವರೆಂದೂ ಅವರಿವರೆಂದು ಎರಡು ನುಡಿಯಲಿಲ್ಲ. ನುಡಿಯೆಲ್ಲ ದೇವನಿಗೇ ಒಪ್ಪಿಸಿದ ಅವನ ಪಡಿನುಡಿ. ಆದ್ದರಿಂದಲೇ ಸರ್ವಧರ್ಮ ಸಮ್ಮೇಳನಕ್ಕೆ ಅಧ್ಯಕ್ಷ. ಕಡೆಗೆ ಅಮೆರಿಕದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿ. ಕೇವಲ ನಲುವತ್ತರ ದಶಕದ ವಯದಲ್ಲಿ ಅಮೆರಿಕದಲ್ಲಿ ನುಡಿದು ಬಂದ ವಿವೇಕಾನಂದ.

ಅಂದಿನಿಂದಲೇ ಮನೆಗೆ ಹುಡುಕಿ ಬರಲು ಆರಂಭಿಸಿದ ವಿದೇಶೀ ವಿದ್ಯಾರ್ಥಿಗಳು. ಮನೆಯ ತುಂಬ ಇಂಗ್ಲಿಷ್ನಲ್ಲಿ ಸಂಸ್ಕೃತ , ವೇದಾಂತ ಪಾಠ. ಇದರೊಡನೆ ಹುಲಿ ಸಾಕಿದ ಸಾಹಸವೂ ಇತ್ತು.ಸರ್ಪಕ್ಕೆ ಮಾತಿನ ಸಂದೇಶ ರವಾನಿಸಿ ಅದು ನಮ್ಮನ್ನು ತಿಳಿಯುತ್ತದೆ ಎಂಬುದನ್ನು ತೋರಿದ್ದರು.

ಗೋವಿಂದಾಚಾರ್ಯರ ಇರವು ಮತ್ತು ಹೊರಗಿನ ವಸ್ತ್ರ ವಿನ್ಯಾಸ ನೋಡಿ ಮಡಿವಂತರಿಗೆ ಕೋಪ. ಸಾಹಿತಿಗಳಿಗೆ ವೇದಾಂತಿ ಎಂಬ ಮಡಿವಂತಿಕೆ. ಸಾಹಿತಿಗಳಿಗೆ ಮಡಿಯ ಅಂತರ ವೇದಾಂತಿಗಳಿಗೆ ಮೈಲಿಗೆಯ ಆಶೌಚ. ಇಬ್ಬರಿಗೂ ಹೆದರದ ನಿಸ್ಸೀಮ ನಡೆ ಇವರದು. ಇವರು ಸತ್ಯಕ್ಕಾಗಿ ನುಡಿವವರು,ನಡೆಯುವವರು, ಬದುಕುವವರು, ಹೆಸರು, ಹಣ, ಪ್ರತಿಷ್ಠೆಗೆ ಅಲ್ಲ ಎಂದು ಜನ ತಿಳಿಯಿತು. ಅಷ್ಟರಲ್ಲಿ ಹುಡುಗ ಗೋವಿಂದ, ಬನ್ನಂಜೆ ಗೋವಿಂದಾಚಾರ್ಯ ಆಗಿ ಬಿಟ್ಟಿದ್ದರು. ಗುರುಗಳು ವಿದ್ಯಾವಾಚಸ್ಪತಿ ಎಂದು ಹರಸಿದರು. ಅವರಾಗಲೇ ಸತ್ಯದ ಮಡಿಲ ಶಿಶು. ಯಾರಿಗೂ ಹೆದರಲಿಲ್ಲ,ದೊಡ್ಡವರ ಮುಂದೆ ಬೀಗಲಿಲ್ಲ, ಅವಮಾನ, ಅನುಮಾನಗಳಿಗೆ ಬಾಗಲಿಲ್ಲ.

ಚಿಕ್ಕ ವಯಸ್ಸಿನಲ್ಲೇ ಸರ್ವಮೂಲ ಗ್ರಂಥ ಸಂಪಾದನೆಯ ಭಾರೀ ಜವಾಬ್ದಾರಿ. ನೀರು ಊಟ ಬಿಟ್ಟು ಚಿಮಿಣಿ ದೀಪದ ಕೆಳಗೆ ಚಾಪೆಯ ಮೇಲೆ ಕುಳಿತು ಬರೆದರು. ಹಳೆಯ ತಾಡವಾಲೆಯ ಅಕ್ಷರ ಓದುತ್ತಾ , ಸತ್ಯ ಹುಡುಕುತ್ತಾ, ಶ್ರೀಮಾನ್ ಮಧ್ವಾಚಾರ್ಯರ ಕಾಣ್ಕೆಗೆ ಕಣ್ಣಾದರು. ಅವರನ್ನು ಹುಡುಕುತ್ತಾ ತನ್ನನ್ನು ಕಂಡರು. ತನ್ನನ್ನು ಕಾಣುತ್ತಾ ಅವರಿಗೇ ಅರ್ಪಿಸಿಕೊಂಡರು. ಶ್ರೀಮದಾಚಾರ್ಯರ ಸತ್ಯ ಹೇಳುವ ಆನಂದಕ್ಕೆ ಹಿಗ್ಗಿದರು. ಅವರು ಆನಂದ ತೀರ್ಥರ ಒಳಗಿದ್ದರು, ತೀರ್ಥ ಎಲ್ಲ ಆನಂದವಲ್ಲ ಎಂಬ ನಿಷ್ಠುರ ಸತ್ಯವನ್ನೂ ಹೇಳಿದರು.

ಇಷ್ಟು ಹೆಸರು ಮಾಡುವ ಹೊತ್ತಿಗೆ ಆಚಾರ್ಯರು ಮಲಗಿ ಬಿಟ್ಟರು. ಏಳಲಾಗದ ಬೆನ್ನು ನೋವು. ಆಚಾರ್ಯರ ಗತಿ ಮುಗಿಯಿತು ಇನ್ನು ನಾವೇ ಎಂದವರುಂಟು ಅವರ ಕೈಯಲ್ಲೇ ಬೆಳೆದವರು. ಮಲಗಿದಲ್ಲಿ ಅಧ್ಯಯನ, ದೇವಮಂತ್ರ ಎಲ್ಲವೂ ಅವಿರತವಿತ್ತು. ಆರು ತಿಂಗಳಿಗೂ ಮಿಕ್ಕು ಆಚಾರ್ಯರು ಮಲಗಿದಲ್ಲೇ. ಆಗ ಅವರ ಎಲ್ಲ ಸೇವೆ ಮಗುವಿನಂತೆ, ಪೂರ್ಣ ಪರಾವಲಂಬಿ. ಆಚಾರ್ಯರು ವರುಷದೊಳಗೆ ಎದ್ದರು ಬೆಳೆದರು,ಬೆಳೆಸಿದರು. "ನಿಮ್ಮನ್ನು ಶತಾಯಗತಾಯ ಮುಗಿಸಲು ಪ್ರಯತ್ನ ನಡೆದಿದೆ. ಆದರೆ ನಿಮ್ಮ ಹಿಂದೆ ಭಾರೀ ಕಾಯುವ ರಾಯರಿದ್ದಾರೆ" ಎಂದು ಒಬ್ಬರು ಅವಧೂತರು ನುಡಿದಿದ್ದರು. ಸರ್ವಮೂಲ ಗ್ರಂಥದ ಪ್ರತಿಯೊಮ್ಮೆ ಮನೆಯಿಂದ ನಾಪತ್ತೆ ಆಯಿತು. ಊರೆಲ್ಲ ಆಚಾರ್ಯರನ್ನು ಆಡಿಕೊಂಡಿತು. "ವಿದೇಶೀಯರಿಗೆ ಡಾಲರಿಗೆ ಮಾರಿದ್ದಾನೆ" ಪುಸ್ತಕ ಇಲ್ಲವಾಗಿ ಬನ್ನಂಜೆ ಉತ್ತರಿಸುವಂತಿರಲಿಲ್ಲ. ಹುಡುಕಾಟ ಕೈಮೀರಿ, ದೇವ ಚಿತ್ತಕ್ಕೆ ಸಮರ್ಪಿಸಿ ಆಚಾರ್ಯರು ಕುಳಿತರು. ಮುಂದೊಂದು ದಿನ ಅಂಜನದಲ್ಲಿ ರಾಯರು ಪುಸ್ತಕ ತೋರಿದರು.ಅದು ಅವರು ತೋರಿದ ಸ್ಥಳದಲ್ಲೇ ಒಂದು ದಿನ ಆಕಸ್ಮಿಕವಾಗಿ ಆಚಾರ್ಯರ ಕೈಗೆ ಸಿಕ್ಕಿತು. ಶ್ಯಮಂತಕ ಮಣಿಯ ಅಪವಾದ ಕಳೆದು ಪರಿಶುದ್ಧನಾದ ಕೃಷ್ಣ– ಗೋವಿಂದ.

ಒಂದು ದಿನ ಸಂಗ್ರಹ ರಾಮಾಯಣದ ತನ್ನದೇ ಪುಸ್ತಕ ಬಿಡುಗಡೆ. ಅತಿಥಿಗಳಾರು ಎಂದರು ವ್ಯವಸ್ಥಾಪಕರು. ಅದು ಅವನ ಪುಸ್ತಕ ಅವನೇ ಅತಿಥಿ ಬೇರೆ ಬೇಡ ಎಂದಿದ್ದರು ಆಚಾರ್ಯರು.ಕಪಿಯೊಂದು ಬಂದು ಅತಿಥಿಯಾಗಿ ಪುಸ್ತಕದ ಪುಟ ತೆರೆಯಿತು. ಸಂಜೆ ಆರರ ಮೇಲೆ ಕಪಿ ತಿರುಗಾಡುವುದೇ ವಿಸ್ಮಯ. ಅಂಥಲ್ಲಿ ಬಂದ ಪ್ರೇಕ್ಷಕರನ್ನು ಕಾಡದೇ ಆಚಾರ್ಯರ ಪಕ್ಕ ಕುಳಿತು, ಪುಸ್ತಕ ತೆರೆದು, ಉಪನ್ಯಾಸ ಮುಗಿಯುವವರೆಗೆ ಉಪಸ್ಥಿತ. ಇದು ಹನುಮ ಕೃಪೆ ಎಂದು ಮನದಲ್ಲೇ ಕೈಮುಗಿದರು ಆಚಾರ್ಯರು. ಈ ಘಟನೆಯಿಂದ ಆಚಾರ್ಯರನ್ನೇ ಜನರು ದೊಡ್ಡದು ಮಾಡಿದರೆ, ಆಚಾರ್ಯರು ಬೀಗಲಿಲ್ಲ ಅವನಿಗೆ ಬಾಗಿದರು.

ಕಾಲಾನಂತರದಲ್ಲಿ ಜನ ಅವರನ್ನು ಪಂಥಕ್ಕೆ ಕಟ್ಟಿದರು. ಪಂಥದ ಒಳಗೇ ಕೆಲವರು ಮೆಟ್ಟಿದರು, ಕೆಲವರು ಎತ್ತಿದರು. ಬನ್ನಂಜೆ ಯಾರಿಗೂ ಹಿಗ್ಗಲಿಲ್ಲ,ಯಾವುದಕ್ಕೂ ಕುಗ್ಗಲಿಲ್ಲ, ಸತ್ಯ ನಿತ್ಯ ಸಂಗಾತಿ. ಹಲವು ಅಪವಾದ, ಕುಹಕದ ಮಾತುಗಳಿಗೆ ಘನಮೌನಿ. ಸತ್ಯದ ಜೊತೆ ಅವಿರತ ಸಂವಾದ. ಭಗವಂತನ ಜೊತೆ ಮಾತಾಡುವವ ಲೋಕಕ್ಕೆ ನಿರಂತರ ಮೌನಿ.

ಪದವಿ ಓದದ ಹುಡುಗ ಪದವೀಧರರಿಗೆ ಪಾಠ ಹೇಳಿದರು. ಓದು ಮೆಟ್ರಿಕ್ ಗೆ ನಿಲ್ಲಿಸಿದ ಬನ್ನಂಜೆ ಉದಯವಾಣಿ ದಿನಪತ್ರಿಕೆಗೆ ಸಂಪಾದಕರಾದರು. ಪತ್ರಿಕೆಯಲ್ಲೂ ಸತ್ಯದ ಜೊತೆ ಒಪ್ಪಂದವಿಲ್ಲದ ನೈಷ್ಠುರ್ಯ. ಹಲವು ಸತ್ಯಗಳು ಪ್ರಕಟವಾಗದೇ ಇವರನ್ನು ದಾಟಲಿಲ್ಲ. ಹಾಗೆ ಸತ್ಯದ ಮುಖಾಮುಖಿಯಿಂದ ಮಠ, ಸಾಹಿತಿ ಹಲವರ ವಿರೋಧ ಎದುರಾದರೂ ಸತ್ಯ ಮರೆಯಾಗಲು ಬಿಡಲಿಲ್ಲ. ಹಲವರನ್ನು ಕಳಕೊಂಡರೂ ಸತ್ಯದ ಕೈಬಿಡಲಿಲ್ಲ.

ವಾತ್ಸ್ಯಾಯನನ ಕಾಮ ಸೂತ್ರದ ವ್ಯಾಖ್ಯಾನವನ್ನು ರತಿವಿಜ್ಞಾನದಲ್ಲಿ ಬರೆದು ತೋರುವುದು ಒಳಗೆ ಪರಿಶುದ್ಧ ಇದ್ದವನಿಗೆ ಮಾತ್ರ ಸಾಧ್ಯ. ಕೊಳಕು ಮನಸಿನ ಕಳ್ಳನಿಗಲ್ಲ. ಮುಚ್ಚುಮರೆಯಲ್ಲಿ ಕಾಮಕೇಳಿ ಆಡುವ ಅಧೀರನಿಗೂ ಸಲ್ಲ.

ಜಿ. ವಿ ಅಯ್ಯರರಂತಹ ಅಪೂರ್ವ ನಿರ್ದೇಶಕರ ಮೂಲಕ ಆಚಾರ್ಯ ತ್ರಯರನ್ನು ಸಿನೆಮಾ ಮೂಲಕ ಕಾಣಿಸಿದರು. ಭಗವದ್ಗೀತೆಗೆ ಮನೋವೈಜ್ಞಾನಿಕ ವಿವರಣೆಯ ಚಿತ್ರ ಕಥೆ ಬರೆದು ಅದನ್ನು ಜೀವಿ ಅಯ್ಯರ್ ನಿರ್ದೇಶಿಸಿದರು. ಹೀಗೆ ಅಪರಿಮಿತ ಕಲಾಪ್ರಜ್ಞೆ, ಕಲಾಪ್ರೇಮಿ, ಸ್ವತಃ ಚಿತ್ರ ಕಲಾವಿದ. ಬಹಳಷ್ಟು ಕಾಲ ಚಿತ್ರ ಬರೆದು ವೇದಾಂತದ ಸೆಳೆತದಲ್ಲಿ ಮುಳುಗಿ ಉಳಿದದ್ದು ಮರೆತಂತೆ ಕುಳಿತ ಮೌನಿ. ಎಡ ಬಲ ಭೇದವಿಲ್ಲದೆ ಎರಡೂ ಕೈಗಳಲ್ಲಿ ಬರೆಯಬಲ್ಲ ಪ್ರತಿಭಾನ್ವಿತ. ಅಂಗೈಯ ಸ್ಪರ್ಶದಿಂದ ಹಲವರ ರೋಗ ನಿವಾರಿಸಿದ ಧನ್ವಂತರಿ.

ನಿವೃತ್ತಿಯ ಬಳಿಕ ನಿರಂತರ ಪ್ರವಚನ. ಕರ್ನಾಟಕದಾದ್ಯಂತ ವೇದಾಂತ ಪ್ರವಚನ. ಮನೆಮನೆಗಳಲ್ಲಿ ಪ್ರಸಿದ್ಧಿ. 'ಆಚಾರ್ಯರು ಪ್ರವಚನ ಮಾಡುವ ಹೊತ್ತು ರಾಯಚೂರಿನಲ್ಲಿ ಕಳ್ಳರು ಮನೆ ಲೂಟಿ ಹೊಡೆಯುತ್ತಿದ್ದರು' ಎಂಬ ಮಾತಿತ್ತು. ಅಂದರೆ ಮನೆಗೆ ಮನೆಯೇ ಬೀಗ ಹಾಕಿ ಪ್ರವಚನಕ್ಕೆ ಹೋಗುತ್ತಿದ್ದರು. ಹೀಗೆ ಬೆಳೆದ ಪ್ರವಚನ ಮಾತಾಗದೇ ಮಂತ್ರವಾಗಿ ಹಲವರನ್ನು ಬೆಳೆಸಿತು.

ಆಚಾರ್ಯರ ಸುತ್ತು ಗುಂಪು ಬೆಳೆಯಿತು. ಗುಂಪೊಂದು ಹಿಂಬಾಲಿಸಿತು ಎಂದರೆ ವಿರೋಧಿ ಗುಂಪು ಹುಟ್ಟಿತು ಎಂದರ್ಥ. ಬನ್ನಕ್ಕೆ ಅಂಜೆ ಅದೇ ಬನ್ನಂಜೆ ಎಂದು ಶಬ್ದ ನಿಷ್ಪತ್ತಿ ಹೇಳಿದ್ದ ಬನ್ನಂಜೆ ಅದಕ್ಕೆಲ್ಲ ಅಲುಗಲಿಲ್ಲ. ಕಟ್ಟಿಕೊಂಡವರನ್ನು ತಲೆಯಲ್ಲಿ ಹೊತ್ತು ತಿರುಗಲಿಲ್ಲ. ಸಾಧ್ಯ ಆದಷ್ಟು ಕಟೆದರು, ತಿದ್ದಿದರು, ಒರೆದರು. ವಿರೋಧ ಗುಂಪಿಗೆ ತಲೆಕೆಡಿಸಿ ಕೊಳ್ಳದೆ ಅವರಾಗಿ ಬಂದರೆ ಆರ್ದ್ರವಾಗಿ ಸ್ವೀಕರಿಸುತ್ತಿದ್ದರು. ಬಾರದವರ ಕುರಿತು ದ್ವೇಷವಿಲ್ಲ. ತನ್ನ ಇಪ್ಪತ್ತೈದರ ವಯದಲ್ಲಿ ಆಗೀಗ ಉಪನ್ಯಾಸ ನೀಡುತ್ತಿದ್ದರು.

ತೊಂಬತ್ತನಾಲ್ಕರಿಂದ ಆ ವಾಗ್ಯಜ್ಞ ಸತತ ಕಾಲು ಶತಮಾನ ನಿರಂತರ ನಡೆಯಿತು. ತನ್ನನ್ನು ತಾನೇ ಆಹುತಿ ಕೊಟ್ಟು ಭಗವದರ್ಪಣೆ ಮಾಡಿದ ಆತ್ಮಯಜ್ಞ. ಅದಕ್ಕೆ ಫಲದ ಆಶೆಯಿಲ್ಲ, ಯಾರನ್ನಾದರೂ ಹುಟ್ಟಿಸುವ ಹಂಬಲವಿಲ್ಲ, ಇನ್ನೊಬ್ಬರನ್ನು ಬೆಳೆಸುವ ಹಸಿವಿಲ್ಲ. ಶುದ್ಧ ಪರಿಪೂರ್ಣ ಪಡೆದದ್ದನ್ನು ನೀಡಿದವನಿಗೇ ಪುನರರ್ಪಣೆ ಮಾಡುವ ಧೀಮಂತ ಯಜ್ಞ. ನುಡಿಯಾಚೆಗಿನ ಮೌನ ಏಕಾಂತದಲ್ಲಿ ಅವನು,ಅವನು,ಅವನು ಮಾತ್ರ. ಹಲವು ಗೌರವ ಅರಸಿ ಬಂತು. ಕೆಲವು ಬಿರುದುಗಳಿಂದ ಗುರುತಿಸಿದರು. ಆದರೆ " ಚೆನ್ನಾಗಿ ಓದಿದ್ದಿ, ನನಗೆ ಸಂತೋಷ ಆಗಿದೆ, ಇನ್ನಷ್ಟು ಬೆಳೆ" ಎಂದು ಹರಸಿದ ತನ್ನ

ತಂದೆಯ ಮಾತನ್ನೇ ಪರಮ ಪಾರಿತೋಷಕ ಎಂದು ಶಿರದಲ್ಲಿ ಧರಿಸಿದರು. ಗುರು ವಿದ್ಯಾಮಾನ್ಯರು ಕೊಟ್ಟ ವಿದ್ಯಾವಾಚಸ್ಪತಿಯನ್ನು ಹೃದಯದಲ್ಲಿ ಇಟ್ಟರು. ಮನೆಯನ್ನು ಮಕ್ಕಳನ್ನು ಎಂದೂ ಕಟ್ಟಿಕೊಂಡವರಲ್ಲ. ತನ್ನ ಅಪ್ಪ ಕೊಟ್ಟ ಸ್ವಾತಂತ್ರ್ಯವನ್ನು ತನ್ನ ಮಕ್ಕಳಿಗೂ ಕೊಟ್ಟು ದೂರ ಉಳಿದ ನಿರಾಳ. ಮನೆಯ ಒಳಗೇ ಇದ್ದು ಮನೆಗೇ ಅಂಟಿಕೊಳ್ಳದ ನಿಸ್ಸಂಸಾರಿ. ಮನೆಯನ್ನು ಗೋವಿಂದ ನಿಲಯ, ಬನ್ನಂಜೆ ಸದನ ಎಂದು ಕರೆಯಬಹುದಾದ ಆತ್ಮರತಿಗೆ ಒಲಿಯದೆ ಈಶಾವಾಸ್ಯಂ ಎಂದು ಹೆಸರಿಸಿ ಭಗವಂತನ ಮನೆ ಎಂದು ಬದುಕಿದ ಅನಿಕೇತ. ತಾನು ಎಪ್ಪತ್ತೈದರ ವರೆಗೂ ತನ್ನ ತಾಯಿಯ ಹೆಸರಿನಲ್ಲಿ ಇದ್ದ ಮನೆಯನ್ನು ತನ್ನ ಹೆಸರಿಗೆ ಪರಿವರ್ತಿಸದೇ ಯಾರದೋ ಮನೆಯಲ್ಲಿ ಇದ್ದಂತೆ ಬದುಕಿದ ಪರದೇಶಿ.

ಮಗ ಕೋಮಾದಲ್ಲಿ ಗಂಭೀರ ಇದ್ದಾಗ ಪ್ರಾರ್ಥಿಸಿ ಎಂದರೆ, "ಶಿಷ್ಯ ಹೀಗೆ ಗಂಭೀರ ಇದ್ದ ಅವನಿಗಾಗಿ ಭಗವಂತನೊಡನೆ ಜಗಳಾಡಿದ್ದೆ. ಶಾಂತನಾಗು ನಿನ್ನ ಹುಡುಗ ಆರಾಮಾಗುತ್ತಾನೆ ಎಂದು ಭಗವಂತ ಕಿವಿಯಲ್ಲಿ ನುಡಿದ. ಅದರ ಮರುದಿನ ಹುಡುಗ ಉಷಾರಾದ ಮನೆಗೆ ಮರಳಿದ. ಈಗ ಇವನದು ದೇವಚಿತ್ತ" ಎಂದು ಕೈಚೆಲ್ಲಿದ ದೇವಶಿಶು. ಒಂದನ್ನು ಕೇಳಿದ್ದಕ್ಕೆ ಇನ್ನೊಂದನ್ನು ಭಗವಂತನಿಗೇ ಅರ್ಪಿಸಿದ ಸಮರ್ಪಕ.ಮಗ ಮುಂದೆ ನಡೆದು ತಾನು ಹಿಂದುಳಿಯ ಬಾರದು ಎಂಬಂತೆ ಅವನ ಸಪಿಂಡೀಕರಣದ ಮಂತ್ರಾಕ್ಷತೆಗೆ ಮುನ್ನ ನಡೆದ ಧೀಮಂತ.

ಕಳೆದ ವರುಷದ ಡಿಸೆಂಬರ್ ಹದಿಮೂರರ ದಿನ "ನಿನ್ನ ಕೈಯಲ್ಲಿ ಅಮೃತ ಸ್ನಾನ ಆಯ್ತಲ್ಲ ಇನ್ನು ಆ ಸ್ನಾನ ಇದ್ದೇ ಇದೆ". "ಇನ್ನು ಕೆಳಗೆ ಇಳಿಯುವುದು ಚೆಂದ ಅಲ್ಲವೇ?" "ಮೈಯ ಮೇಲಿನ ಎಲ್ಲಾ ಬಟ್ಟೆ ಕಳೆದು ಬಿಳೀ ಬಟ್ಟೆ ಹೊದೆಯಿಸು" ಎಂದೆಲ್ಲ ಸಾವಿನ ಪೂರ್ವ ಸೂಚನೆ ನೀಡುತ್ತಾ, "ಮನೆಯ ನಂಬರ್ ಸಿಗುತ್ತಿಲ್ಲ ಈ ಮನೆ ಅಲ್ಲ ಆ ಮನೆ ನಂಬರ್ " ಎಂಬ ಕೊನೆಯ ಮಾತನ್ನು ನಗುತ್ತಾ ಹೇಳಿ ಹತ್ತೇ ನಿಮಿಷದಲ್ಲಿ ಮನೆ ಸೇರಿದ ಧೀರ. ನಾನು ಸೇರಬೇಕಾದ ಮನೆ ನನಗೆ ಗೊತ್ತು ಎಂಬ ಸೂಚನೆ. ಸಿಕ್ಕ ಮೇಲೆ ಇರುವುದಿಲ್ಲ ಎಂಬುದನ್ನು ಸೂಚಿಸಿ ಹೋಗುವ ಎದೆಗಾರಿಕೆ. ಸಿಕ್ಕಿತು ಎಂದು ಹತ್ತೇ ನಿಮಿಷದಲ್ಲಿ ನಡೆದು ತೋರಿದ ಇಚ್ಛಾಮರಣಿ.

"ಬನ್ನಂಜೆಯವರು ಹೋಗಿಲ್ಲ ಅವರೀಗ ದೇವಲೋಕದಲ್ಲಿ ಇದ್ದರೆ ಬೃಹಸ್ಪತಿಗಳು ಅವರೊಂದಿಗೆ ಚರ್ಚಿಸುತ್ತಿರುತ್ತಾರೆ. ವೈಕುಂಠದಲ್ಲಿ ಇದ್ದರೆ ನಾರದರು ಅವರನ್ನು ಮಾತಾಡಿಸುತ್ತಿರುತ್ತಾರೆ. ಅವರು ಬ್ರಹ್ಮ ಲೋಕದಲ್ಲಿ ಇದ್ದರೆ ಸಾಕ್ಷಾತ್ ಸರಸ್ವತಿ ಅವರ ಜೊತೆ ಮಾತಾಡುತ್ತಿರುತ್ತಾಳೆ" ಎಂಬ ಅವಿಸ್ಮರಣೀಯ ನುಡಿಮುತ್ತಿನ ಹಾರ ತೊಡಿಸಿದವರಿದ್ದಾರೆ.

"ಇರವು ಸಂಪತ್ತಲ್ಲ ಇರವಿನ ಅರಿವು ಸಂಪತ್ತು"
"ನಾನು ಹೆಣ್ಣಿನಲ್ಲಿ ವೇದಾಂತ ಕಂಡೆ ; ವೇದಾಂತದಲ್ಲಿ ಹೆಣ್ಣನ್ನು ಕಂಡೆ"
"ದೇವರನ್ನು ನಂಬುವವರಿಗೂ ಅವನು ಗೊತ್ತಿಲ್ಲ
ನಂಬದವರಿಗೂ ಅವನು ಗೊತ್ತಿಲ್ಲ
ಇಬ್ಬರಿಗೂ ಗೊತ್ತಿಲ್ಲ ಎನ್ನುವುದೇ ಅರ್ಹತೆ"

ಇವು ಅವರ ಮಾತಿನ ಧಾಟಿ.

ಎಲ್ಲ ಕುರುಹು ಲಾಂಛನಗಳನ್ನು ದಾಟಿದ ಬನ್ನಂಜೆ ಗೋವಿಂದಾಚಾರ್ಯರ ಎಂಬತ್ತೈದನೆಯ ಹುಟ್ಟಿದ ದಿನ ಆಗಸ್ಟ್ ೩. (ನಕ್ಷತ್ರಕ್ಕನುಗುಣವಾಗಿ ಅಲ್ಲ) ಈ ದಿನಕ್ಕೆ ಇದು ಅಪ್ಪನಿಗೆ ಅರ್ಪಿಸುವ ಪದಪುಷ್ಪ. ಬೇರಿನ ಕುರಿತು ಎಲೆ ಮಾತಾಡೀತೇ? ಸಾಗರದಾಳ ನದಿ ಹೇಳಬಹುದೇ? ಉಪ್ಪಿನ ರುಚಿ ಸಮುದ್ರಕ್ಕೇನು ಗೊತ್ತು?

# ಸಣ್ಣ ಕಥೆ

ಗ್ರೀಷ್ಮ ಗಾಯನ



# ವರ್ಜಿನ್ ಬೇಬಿ

**ಸರಿತಾ ನವಲಿ,** ನ್ಯೂಜೆರ್ಸಿ

(ಕನ್ನಡದ ಹೆಸರಾಂತ ಕಾದಂಬರಿಕಾರ್ತಿ ವಾಣಿ ಅವರ ಸ್ಮರಣಾರ್ಥ ಏರ್ಪಡಿಸಿದ್ದ 'ವಾಣಿ ಕೌಟುಂಬಿಕ ಕಥಾಸ್ಪರ್ಧೆ-2023 ರಲ್ಲಿ ಮೊದಲ ಬಹುಮಾನ ಪಡೆದ ಕಥೆ)

ಆ ದಿನ ವರ್ಕ್ ಫ್ರಾಮ್ ಹೋಮ್ ಮಾಡ್ತಿದ್ದ ಮಾನಸ ಪ್ರಾಜೆಕ್ಟಿನ ಕೆಲಸವನ್ನು ಒಂದು ಹಂತಕ್ಕೆ ಮುಗಿಸಿ ಅರ್ಧದಿನದ ರಜೆ ಬೇಕೆಂದು ತನ್ನ ಟೀಮ್ ಮ್ಯಾನೇಜರ್ ಗೆ ಇ-ಮೇಲ್ ಕಳಿಸಿ, ಲ್ಯಾಪ್ ಟಾಪ್ ಸ್ಕ್ರೀನಿನ ಮೇಲೆ ಆ ತಿಂಗಳಿನ ಕ್ಯಾಲೆಂಡರನ್ನು ಕ್ಲಿಕ್ ಮಾಡಿ ದಿನಗಳನ್ನು ನೋಡುತ್ತಾ ಕುಳಿತಳು. ಮನಸ್ಸಿನಲ್ಲಿಯೇ ತನ್ನ ತಿಂಗಳ ಚಕ್ರದ ದಿನಗಳನ್ನು ಲೆಕ್ಕ ಹಾಕ್ತಾಯಿದ್ದವಳಿಗೆ, ಈಗ ತಾನು ತೆಗೆದುಕೊಂಡಿರುವ ನಿರ್ಧಾರದ ಬಗ್ಗೆ ಮನೆಯವರು ಹೇಗೆಲ್ಲ ನಡೆದುಕೊಳ್ಳಬಹುದು ಎನ್ನುವ ಯೋಚನೆಯೂ ಮೂಡಿತು. ಅಪ್ಪ, ಅಮ್ಮ, ಅಜ್ಜಿ ಯಾವಾಗಲೂ ತಮ್ಮ ಬಂಧು-ಬಳಗದವರು, ಅಕ್ಕ-ಪಕ್ಕದವರು ಮೆಚ್ಚುವಂತೆಯೇ ಬದುಕಿಕೊಂಡು ಬಂದಿದ್ದಾರೆ. "ಇನ್ನೊಬ್ಬರನ್ನು ಮೆಚ್ಚಿಸುವುದನ್ನೇ ಬದುಕಿನ ಧ್ಯೇಯವಾಗಿಸಿಕೊಂಡರೆ ಮನುಷ್ಯ ತನಗಾಗಿ ಬದುಕುವುದು ಯಾವಾಗ? ಇಲ್ಲ...ನಾನು ನನಗಾಗಿ ಬದುಕಬೇಕು" ಎಂದು ತನ್ನಷ್ಟಕ್ಕೇ ಮಾತಾಡಿಕೊಳ್ಳುತ್ತ ಲ್ಯಾಪ್ ಟಾಪ್ ಷಟ್ ಡೌನ್ ಮಾಡಿ, ಬ್ಯಾಗನ್ನು ಕೈಗೆತ್ತಿಕೊಂಡು ಮೆಟ್ಟಿಲಿಳಿದು ಕೆಳಗಿನ ಕೋಣೆಗೆ ಬಂದು, "ಅಮ್ಮ...ನಾನು ಸ್ವಲ್ಪ ಹೊರಗಡೆ ಹೋಗಿ ಬರ್ತೀನಿ" ಅಂದಳು.

"ಇವತ್ತು ವಿದ್ಯಾಪೀಠದಲ್ಲಿ ಪೂಜೆಗೆ ಕೊಟ್ಟಿದ್ರಲ್ಲ...ನಿಮ್ಮಮ್ಮ, ಅಪ್ಪ ದೇವರ ದರ್ಶನ ಮಾಡಿಕೊಂಡು, ಪ್ರಸಾದ ತೊಗೊಂಡು ಬರಲಿಕ್ಕೆ ಹೋಗಿದ್ದಾರೆ ಪುಟ್ಟಿ...ನೀನು ಮೀಟಿಂಗಲ್ಲಿ ಇದ್ದೆ ಅಂತ ನಿನಗೆ ಹೇಳಲಿಲ್ಲ...ಇನ್ನೇನು ಬರ್ತಾರೆ..." ಮುಂದಿನ ಬಾಗಿಲಿನ ಹೊರಗೆ ಕುರ್ಚಿ ಹಾಕಿಕೊಂಡು ಕುಳಿತು ಬಿಸಿಲು ಕಾಯಿಸುತ್ತಿದ್ದ ಕಮಲಮ್ಮ ಮೊಮ್ಮಗಳಿಗೆ ಹೇಳಿದರು.

"ಓ...ನನಗೆ ಆದಷ್ಟು ಬೇಗ ಗಂಡು ಸಿಕ್ಕು ಮದುವೆಯಾಗಲಿ ಅಂತ ಬೇಡಿಕೊಂಡು ಇವತ್ತು ಇನ್ನೊಂದು ಪೂಜೆಗೆ ಕೊಟ್ಟಿದ್ದಾರಾ? ನಾನು ಮದುವೆ ಮಾಡಿಕೊಳ್ಳೋದಿಲ್ಲ ಅಂತ ಎಷ್ಟು ಸಲ ಹೇಳಿದ್ರೂ ಇವರಿಗೆ ಅರ್ಥ ಆಗೋದಿಲ್ಲ..." ರೇಗಿದಳು ಮಾನಸಿ.

"ಯಾಕಮ್ಮ ಕೋಪ ಮಾಡಿಕೋತೀಯ? ನೀನು ಹೀಗೆ ಮದುವೆ ಬೇಡ ಅಂತ ಹಟ ಮಾಡಿದ್ರೆ ಹೇಗೆ? ನಿಗೊಂದು ಮದುವೆ ಅಂತ ಮಾಡಿದ್ರೆ ಅಪ್ಪ-ಅಮ್ಮನಿಗೆ ಒಂದು ಜವಾಬ್ದಾರಿ ಕಳಿಯುತ್ತೆ...ಇಷ್ಟೋತ್ತಿಗಾಗಲೇ ನಿನ್ನ ಮದುವೆಯಾಗಿ ಎರಡು ಮಕ್ಕಳು ಇರಬೇಕಾಗಿತ್ತು....ನಾನೂ ಮರಿಮೊಮ್ಮಕ್ಕಳ ಮುಖ ನೋಡಿ ಕನಕಾಭಿಷೇಕ ಮಾಡಿಸಿಕೊಳ್ತಿದ್ದೆ..."

"ಮರಿಮೊಮ್ಮಕ್ಕಳ ಮುಖ ನೋಡಿ ಕನಕಾಭಿಷೇಕ ಮಾಡಿಸಿಕೊಳ್ಳಬೇಕೆಂದರೆ ಮದುವೆನೇ ಆಗಬೇಕು ಅಂತೇನಿಲ್ಲ ಅಜ್ಜಿ..." ತಾನಾಡಿದ ಮಾತಿಗೆ ಪಟಕ್ಕನೇ ನಾಲಿಗೆ ಕಚ್ಚಿಕೊಂಡಳು ಮಾನಸಿ.

"ಏನಮ್ಮಾ ಹಂಗಂದ್ರೆ...ತಮಾಷೆ ಮಾಡ್ತಾಯಿದ್ದೀಯಾ?"

"ಏನಿಲ್ಲ ಅಜ್ಜಿ...ಯಾವುದೋ ಮುಖ್ಯವಾದ ಕೆಲಸದ ಮೇಲೆ ಹೊರಗಡೆ ಹೋಗ್ತಾಯಿದ್ದೀನಿ...ನಮಸ್ಕಾರ ಮಾಡ್ತೀನಿ...ಆಶೀರ್ವಾದ ಮಾಡು.." ಮಾನಸಿ ಬಗ್ಗಿಕೊಂಡು ಕಮಲಮ್ಮರ ಕಾಲು ಮುಟ್ಟಿದಳು.

"ಎಲ್ಲ ಒಳ್ಳೇದಾಗಲಿ ಪುಟ್ಟಿ..." ತುಂಬು ಮನಸ್ಸಿನಿಂದ ಹರಸಿದರು ಕಮಲಮ್ಮ.
ಅಜ್ಜಿಗೆ ಹೇಳಿ ಮನೆಯಿಂದ ನಡೆದುಕೊಂಡು ಮುಖ್ಯ ರಸ್ತೆಗೆ ಬಂದು ಆಟೋ ಹಿಡಿದು ಜಯನಗರದ ಕಡೆ ಹೊರಟಳು ಮಾನಸಿ. ವಿದ್ಯಾಪೀಠ ಸರ್ಕಲ್ಲಿನ ಹತ್ತಿರ ದೇವಸ್ಥಾನ ಕಂಡಾಗ, ಒಂದೆರಡು ಗಳಿಗೆ ಕಣ್ಣುಮುಚ್ಚಿ ದೇವಸ್ಥಾನದಲ್ಲಿನ ಶ್ರೀಕೃಷ್ಣನನ್ನು ಧ್ಯಾನಿಸಿದಳು. ದೇವರ ಮುಂದೆ ಕೈಮುಗಿದು ಕುಳಿತು ತನ್ನ ಮದುವೆಗಾಗಿ ಪ್ರಾರ್ಥಿಸುತ್ತಿರುವ ಅಮ್ಮ-ಅಪ್ಪರನ್ನು ನೆನೆದು ಭಾವುಕಳಾದ ಮಾನಸಿಯ ಕಣ್ಣಂಚು ಒದ್ದೆಯಾಯಿತು. ಈ ಭಾವುಕತೆ ತನ್ನ ನಿರ್ಧಾರಕ್ಕೆ ಅಡ್ಡಿಯಾಗಬಾರದು, ಮುಂದಿಟ್ಟ ಹೆಜ್ಜೆ ಹಿಂತೆಗೆಯಬಾರದು ಎಂದುಕೊಂಡು ರಸ್ತೆಯ ಅಕ್ಕ-ಪಕ್ಕದಲ್ಲಿ ಕಾಣುತ್ತಿದ್ದ ಅಂಗಡಿಗಳನ್ನು, ಅಲ್ಲಿ ಪೇರಿಸಿಟ್ಟಿದ್ದ ಸಾಮಗ್ರಿಗಳನ್ನು ನೋಡುತ್ತ ಕುಳಿತುಕೊಂಡಳು.

ವಾಸುದೇವ ಮತ್ತು ವಸುಧಾ ದಂಪತಿಗಳ ಒಬ್ಬಳೇ ಮಗಳಾದ ಮಾನಸಿ ಮುದ್ದಿನಿಂದಲೇ ಬೆಳೆದವಳು. ಓದಿನಲ್ಲಿ ಬುದ್ಧಿವಂತ ಹುಡುಗಿ. ಇಂಜಿನಿಯರಿಂಗ್ ಮುಗಿಸಿ ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮಾನಸಿ ತನ್ನ ಪ್ರತಿಭೆಯಿಂದ ಹಲವಾರು ಮಹತ್ವದ ಪ್ರಾಜೆಕ್ಟ್‌ಗಳನ್ನು ನಿಭಾಯಿಸಿ ಕಡಿಮೆ ಸಮಯದಲ್ಲಿಯೇ ಟೀಮ್ ಲೀಡ್ ಆಗಿ ಪ್ರಮೋಷನ್ ಪಡೆದುಕೊಂಡವಳು. ಆಫೀಸಿನ ಕೆಲಸದ ಮೇಲೆ ನಾಲ್ಕೈದು ದೇಶಗಳನ್ನು ಸುತ್ತಿದವಳು. ಇನ್ನು ಕೆಲವೇ ತಿಂಗಳುಗಳಲ್ಲಿ ಟೀಮ್ ಮ್ಯಾನೇಜರ್ ಆಗಿ ಪ್ರಮೋಷನ್ ಪಡೆಯುವುದನ್ನು ಎದುರು ನೋಡುತ್ತಿದ್ದಾಳೆ. ಮದುವೆ-ಮಕ್ಕಳು, ಸಂಸಾರ ಎನ್ನುವ ಯೋಚನೆಯೇ ಇರದ ಮಾನಸಿಗೆ ತಾನಾಯಿತು, ತನ್ನ ಕೆಲಸವಾಯಿತು ಎನ್ನುವುದೇ ಬದುಕಾಗಿದೆ.

* * * * *

ವರ್ಷಗಳು ಕಳೆದಂತೆಲ್ಲ ಅಜ್ಜಿ ಕಮಲಮ್ಮ ಮತ್ತು ವಸುಧಾಗೆ ಮಾನಸಿಯ ಮದುವೆಯದೇ ಯೋಚನೆಯಾಗಿದೆ. ತುಸು ನಸುಗಪ್ಪು ಬಣ್ಣದ, ಅಷ್ಟೇನೂ ಆಕರ್ಷಕವಲ್ಲದ ಮೈಕಟ್ಟಿನವಳೆಂದು ಅವಳ ಮದುವೆಯಾಗುವುದು ಅಷ್ಟು ಸುಲಭವಲ್ಲ ಎನ್ನುವುದು ಅವರಿಬ್ಬರ ಅಭಿಪ್ರಾಯ. ಮದುವೆಯಾಗುವ ಹುಡುಗಿ ಸುಂದರವಾಗಿರಬೇಕೆಂಬ ಮನಸ್ಥಿತಿಯ ಹುಡುಗನ ಮನೆಯವರು ಮಾನಸಿಯನ್ನು ಒಪ್ಪದೇ ಹೋದಾಗ ವಸುಧಾ ಮತ್ತು ಕಮಲಮ್ಮ ಬೇಸರ ಮಾಡಿಕೊಳ್ಳುತ್ತಿದ್ದರು. ತಮ್ಮ ಸಂಬಂಧಿಕರಲ್ಲಿ ಮಾನಸಿಯ ವಯಸ್ಸಿನ ಹೆಣ್ಣುಮಕ್ಕಳಿಗೆಲ್ಲ ಆಗಲೇ ಮದುವೆಯಾಗಿ, ಮಕ್ಕಳಾಗಿವೆ ಆದರೆ ಇವಳಿನ್ನೂ ಹೀಗೇ ಉಳಿದುಬಿಟ್ಟಿಯಲ್ಲ ಎನ್ನುವುದೇ ಅವರ ಚಿಂತೆ. ಮೂವತ್ನಾಲ್ಕು ವರ್ಷದ ಮಾನಸಿಗೆ ಆದಷ್ಟು ಬೇಗ ಮದುವೆಯಾಗಲಿ ಎಂದು ಹರಕೆ ಹೊತ್ತು, ವ್ರತ, ಪೂಜೆಗಳನ್ನು ಮಾಡಿಸುತ್ತಿದ್ದ ವಸುಧಾಗೆ ಇದೆಲ್ಲ ಬೇಡವೆನ್ನಲು ಮನಸ್ಸಾಗದೇ ವಾಸುದೇವ ಜೊತೆಯಾಗುತ್ತಿದ್ದರು. ಆದರೆ ಅವರಿಗೆ ಈ ವಯಸ್ಸಿನಲ್ಲಿಯೇ ದೊಡ್ಡ ಹುದ್ದೆಗೇರಿ, ಲಕ್ಷಗಟ್ಟಲೆ ಸಂಬಳ ಪಡೆಯುತ್ತಿರುವ ಮಗಳ ಮೇಲೆ ಬಹಳ ಹೆಮ್ಮೆ. ಮಾನಸಿಯ ಕೆಲಸ, ಸಂಬಳ ನೋಡಿ ಹಲವಾರು ಬಾರಿ ಹುಡುಗನ ಮನೆಯವರು ಮಾನಸಿಯನ್ನು ಮದುವೆಯಾಗಲು ಒಪ್ಪಿಕೊಂಡರೂ, ಮಾತಿನಲ್ಲಿಯೇ ಅವರ ಮನಸ್ಸಿನ ಇಂಗಿತವನ್ನು ತಿಳಿದು ಅಂತಹ ಸಂಬಂಧವನ್ನು ರಿಜೆಕ್ಟ್ ಮಾಡುತ್ತಿದ್ದ ಮಾನಸಿಗೆ ಅಪ್ಪ ವಾಸುದೇವ ಬೆಂಬಲವಾಗಿ ನಿಲ್ಲುತ್ತಿದ್ದರು. ಇಂತಹ ನಿರ್ಧಾರಗಳಿಂದ ಮನೆಯಲ್ಲಿ ಆಗಾಗ ಮನಸ್ತಾಪಗಳು ಹುಟ್ಟಿಕೊಂಡು, ಮದುವೆ ಎನ್ನುವ ಮೂರಕ್ಷರ ಮಾನಸಿಗೆ ಕಿರಿಕಿರಿಯನ್ನುಂಟು ಮಾಡಿತ್ತು.

* * * * *

ಆಟೋದಲ್ಲಿ ಕುಳಿತುಕೊಂಡು ರಸ್ತೆಯ ಅಕ್ಕ-ಪಕ್ಕ ನೋಡುತ್ತಿದ್ದ ಮಾನಸಿಗೆ ಗಾಂಧಿಬಜಾರಿನ ಫುಟ್ ಪಾತಿನಲ್ಲಿ ವ್ಯಾಪಾರಕ್ಕೆಂದು ಗುಡ್ಡೆ ಹಾಕಿಕೊಂಡಿದ್ದ ಬಣ್ಣ-ಬಣ್ಣದ ಬೊಂಬೆಗಳು ಕಂಡವು. ಆಸೆ ಕಣ್ಣುಗಳಿಂದ ಬೊಂಬೆಗಳನ್ನು ನೋಡುತ್ತಿದ್ದ ಪುಟ್ಟ ಮಗುವೊಂದು ಮಾನಸಿಯ ಗಮನ ಸೆಳೆಯಿತು. ಪಕ್ಕದ ಅಂಗಡಿಯ ಮುಂದೆ ತೂಗು ಹಾಗಿದ್ದ ಪುಟ್ಟ-ಪುಟ್ಟ ಫ್ರಾಕುಗಳು, ಫ್ಯಾನ್ಸಿ ಬಟ್ಟೆಗಳು, ಪುಟ್ಟದಾದ ಲಂಗ-ರವಿಕೆಯನ್ನು ಆಸೆ ಕಣ್ಣುಗಳಿಂದ ನೋಡಿದ ಮಾನಸಿಗೆ ಬಣ್ಣ-ಬಣ್ಣದ ರಿಬ್ಬನ್, ಹೇರ್ ಬ್ಯಾಂಡ್, ಬಿಂದಿ, ಬಳೆಗಳನ್ನು ಪೇರಿಸಿಟ್ಟುಕೊಂಡಿದ್ದ ತಳ್ಳುಗಾಡಿ ಕಂಡಿತು. ಮೊಗ್ಗಿನ ಜಡೆಗೆಂದು ಹೆಣೆದಿಟ್ಟಿದ್ದ ಮಲ್ಲಿಗೆ ಹೂ, ಪಕ್ಕದ ಅಂಗಡಿಯಲ್ಲಿ ದೊಡ್ಡ ಅಂಚಿನ ರೇಷ್ಮೆ ಲಂಗ, ಭರ್ಜರಿ ರೇಷ್ಮೆ ಸೀರೆ ಉಟ್ಟ ಬೊಂಬೆಗಳು ಕಣ್ಣನ್ನು ಸೆಳೆದವು. ಈ ಎಲ್ಲ ವಸ್ತುಗಳು ತನ್ನ ಬದುಕಿನ ಭಾಗವಾಗಿ, ಅದೆಷ್ಟೋ ಸುಂದರ ಕ್ಷಣಗಳನ್ನು ತನಗೆ ನೀಡಬಹುದು ಎಂದು ಯೋಚಿಸಿದಳು. ಆಟೋ ಮುಂದೆ ಹೋದಂತೆ ಪಕ್ಕದಲ್ಲಿ ಕಂಡ ಕಲ್ಯಾಣ ಮಂಟಪ ಮಾನಸಿಯಲ್ಲಿ ನಿರಾಸೆ ಮೂಡಿಸಿತು. ಆಟೋ ಜಯನಗರ ತಲುಪಿ ಕಟ್ಟಡವೊಂದರ ಮುಂದೆ ಬ್ರೇಕ್ ಹಾಕಿ ನಿಲ್ಲಿಸಿದಾಗ, ಮಾನಸಿ ಕಟ್ಟಿಕೊಳ್ಳುತ್ತಿದ್ದ ಕಾಲ್ಪನಿಕ ಸೌಧಕ್ಕೂ ಬ್ರೇಕ್ ಬಿದ್ದಂತಾಗಿ ಒಂದು ಕ್ಷಣ ನಿರಾಸೆಯಾದರೂ, ಆಟೋದವನಿಗೆ ದುಡ್ಡು ಕೊಟ್ಟು ತಾನು ಹೋಗಬೇಕಾಗಿದ್ದ ಕಟ್ಟಡದ ಬೋರ್ಡನ್ನು ನೋಡಿ ಅವಳಿಗೆ ಸಮಾಧಾನವಾಯಿತು.

* * * * *

'ಮಡಿಲು' ಫರ್ಟಿಲಿಟಿ ಕ್ಲಿನಿಕ್ಕಿನ ಮೆಟ್ಟಿಲುಗಳನ್ನೇರಿ ಒಳಹೋದ ಮಾನಸಿಗೆ  ತಾಯ್ತನದ ಅನುಭೂತಿಯಾಯಿತು. ಕೋಣೆಯ ಬಾಗಿಲು ತಟ್ಟಿ ಒಳಗೆ ಬಂದ ಮಾನಸಿಯನ್ನು ಡಾ.ನಂದಿನಿ ನಗುಮುಖದಿಂದಲೇ ಸ್ವಾಗತಿಸಿದರು. ಬದುಕಿನ ಪುಟದಿಂದ ಮದುವೆ ಎನ್ನುವ ಪದವನ್ನು ಅಳಿಸಿಹಾಕಲು ನಿಶ್ಚಯಿಸಿದ ಮಾನಸಿ, ತನ್ನ ಅಂಡಾಣುವನ್ನು ಶೀತಲಿಕರಿಸಿ (Egg Freezing), ಶೇಖರಿಸಿಟ್ಟು(Cryopreservation), ದಾನಿಯಿಂದ ವೀರ್ಯಾಣುವನ್ನು ಪಡೆದುಕೊಂಡು, ಸರೋಗಸಿಯಿಂದ(ಬಾಡಿಗೆ ತಾಯಿಯಿಂದ) ಮಗುವನ್ನು ಪಡೆದು, ಕನ್ಯೆಯಾಗಿದ್ದುಕೊಂಡೇ ತಾಯಿಯಾಗುವ ನಿರ್ಧಾರವನ್ನು ತೆಗೆದುಕೊಂಡಿದ್ದಳು! ತನ್ನ ನಿರ್ಧಾರದ ಬಗ್ಗೆ ಡಾ.ನಂದಿನಿಯವರಲ್ಲಿ ಚರ್ಚಿಸಿ ಸಂಪೂರ್ಣ ಮಾಹಿತಿಯನ್ನು ಪಡೆದಿದ್ದ ಮಾನಸಿಗೆ, ಬದಲಾದ ಕಾಲ ಮತ್ತು ಸಮಾಜ, ಮುಂದುವರಿದ ವಿಜ್ಞಾನ, ಆಗಾಗ-ಅಲ್ಲಲ್ಲಿ ಈ ಬಗ್ಗೆ  ಕೇಳಿಬರುತ್ತಿದ್ದ ಸುದ್ದಿಗಳು ಮನೋಬಲವನ್ನು ನೀಡಿದ್ದವು. ಮೂವತ್ತೈದು ವರ್ಷಕ್ಕೂ ಮೊದಲೇ ಅಂಡಾಣುವನ್ನು ಶೀತಲೀಕರಿಸವುದು ಸೂಕ್ತವೆಂದು ಡಾಕ್ಟರ್ ಹೇಳಿದಾಗ, ಆ ದಿನ ಮನೆಯಲ್ಲಿ ತನ್ನ ತಿಂಗಳ ಚಕ್ರದಲ್ಲಿ ಅಂಡಾಣು ಬಿಡುಗಡೆಯಾಗುವ (Ovulation) ದಿನವನ್ನು ಲೆಕ್ಕ  ಹಾಕಿಕೊಂಡಿದ್ದಳು. 'ಮಡಿಲು' ಫರ್ಟಿಲಿಟಿ ಕ್ಲಿನಿಕ್ ಮಾನಸಿಯ ಮಡಿಲು ತುಂಬುವ ಎಲ್ಲ ವ್ಯವಸ್ಥೆಯನ್ನೂ ಮಾಡಿತ್ತು.

ಸಂಜೆ ಮನೆಗೆ ಹಿಂದಿರುಗಿದ ಮಾನಸಿಯನ್ನು ಅಮ್ಮನ ಪ್ರಶ್ನಾರ್ಥಕ  ಕಣ್ಣುಗಳು ಸ್ವಾಗತಿಸಿದವು. ಬಚ್ಚಲಿಗೆ ಹೋಗಿ ಕೈಕಾಲು-ಮುಖ ತೊಳೆದು ಬಂದ ಮಾನಸಿ, ದೇವರ ಕೋಣೆಯನ್ನು ಹೊಕ್ಕು ದೀಪ ಹಚ್ಚಿಟ್ಟು ನಮಸ್ಕಾರ ಮಾಡಿದಳು. “ದೇವರ ಮುಂದೆ ವಿದ್ಯಾಪೀಠದ ಪ್ರಸಾದ ಇಟ್ಟಿದ್ದೀನಿ, ತೊಗೊ ಮಾನಸಿ...ಆದಷ್ಟು ಬೇಗ ಮದುವೆಯಾಗಲಿ ಅಂತ ಬೇಡಿಕೊ” ಎಂದರು ವಸುಧಾ. ಅಪರೂಪಕ್ಕೆ ದೇವರಮನೆಗೆ ಹೋದ ಮೊಮ್ಮಗಳನ್ನು ನೋಡಿ, ಅಲ್ಲೇ ಸೋಫಾದ ಮೇಲೆ ಕುಳಿತು ಟಿ.ವಿ. ನೋಡುತ್ತಿದ್ದ ಕಮಲಮ್ಮನವರಿಗೆ ಅಚ್ಚರಿಯಾಯಿತು. ಪ್ರಸಾದ ತಿನ್ನುತ್ತ ಹೊರಗೆ ಬಂದ ಮಾನಸಿ, ಒಳಗಿನ ಕೋಣೆಯಲ್ಲಿದ್ದ ಅಪ್ಪನನ್ನು ಹೊರಗೆ ಬರಲು ಹೇಳಿ, ಮೊದಲಿಗೆ ಅಜ್ಜಿಗೆ ನಮಸ್ಕಾರ ಮಾಡಿ, ನಂತರ ಅಪ್ಪ-ಅಮ್ಮನಿಗೆ ನಮಸ್ಕಾರ ಮಾಡಿ ಮಾತನಾಡಿದಳು. ಇವತ್ತು ಇವಳ್ಯಾಕೆ ಹೀಗೆ ಮಾಡ್ತಿದ್ದಾಳೆ ಅಂತ ಮೂವರಿಗೂ ಆಶ್ಚರ್ಯವಾಯಿತು.

“ನಾನು ಮದುವೆ ಆಗಬಾರದೆಂದು ನಿರ್ಧಾರ ಮಾಡಿದ್ದೇನೆ. ನನ್ಗೆ ಗೊತ್ತು...ನಾನು ಮದುವೆ ಆಗದೇ ಉಳಿದು ಬಿಟ್ಟರೆ ನನ್ನ ಮುಂದಿನ ಬದುಕು ಹೇಗೆ ಅಂತ ನೀವೆಲ್ಲ ಯೋಚನೆ ಮಾಡ್ತೀರಿ...ಚಿಂತೆ ಮಾಡ್ತೀರಿ. ಅದಕ್ಕೆ ನನಗೆ ಮದುವೆ ಆಗಲಿ ಅಂತ ಹರಸಿಕೊಂಡು ವ್ರತ, ಪೂಜೆಯೆಲ್ಲ ಮಾಡ್ತಾಯಿದ್ದೀರಿ...ನಿಮಗೆ ನನ್ನ ನಿರ್ಧಾರದಿಂದ ಖಂಡಿತ ಬೇಜಾರಾಗುತ್ತೆ. ನಾನು ಮದುವೆ ಮಾಡಿಕೊಳ್ಳುವುದಿಲ್ಲ. ಆದರೆ ಮದುವೆಯಾಗದೇ ತಾಯಿಯಾಗ್ತೀನಿ”.
“ಏನೇ ಹಾಗಂದ್ರೇ? ಏನು ಅನಾಹುತ ಮಾಡಿಕೊಂಡಿದ್ದೀಯ? ನಮ್ಮ ಮನೆ ಮಾನ-ಮರ್ಯಾದೆ ಏನಾಗಬೇಕು?” ಗಾಬರಿಯಿಂದ ಕೂಗಿದರು ವಸುಧಾ.

* * * * *

“ಏನಮ್ಮ ನೀನು ಹೇಳ್ತಾಯಿರೋದು, ಮದುವೆ ವಿಷಯದಲ್ಲಿ ನಾನು ಯಾವಾಗ್ಲೂ ನಿನಗೆ ಸಪೋರ್ಟ್ ಮಾಡಿದ್ದೀನಿ, ಆದ್ರೆ ಇದೇನಿದು?” ನಡುಗುವ ಧ್ವನಿಯಲ್ಲಿ ಕೇಳಿದರು ವಾಸುದೇವ.

“ಇನ್ನು ನಾವು ನಾಲ್ಕು ಜನರ ಮುಂದೆ ಹೇಗೆ ತಲೆ ಎತ್ತಿಕೊಂಡು ತಿರುಗೋಕಾಗುತ್ತೆ....ಬುದ್ಧಿವಂತೆ ಅಂತ ನಿನ್ನನ್ನು ಜಾಸ್ತಿ ಓದಿಸಿದ್ದೇ ತಪ್ಪಾಯಿತು...ಜೀವನದಲ್ಲಿ ನಾನು ಇನ್ನೇನು ನೋಡ್ಬೇಕೋ...ಪರಮಾತ್ಮಾ...?” ಗೋಳಿಟ್ಟರು ಕಮಲಮ್ಮ.

“ನಾನು ಯಾವ ತಪ್ಪನ್ನೂ ಮಾಡಿಲ್ಲ...ಈಗ ಕಾಲ ಬದಲಾಗಿದೆ...ವಿಜ್ಞಾನ ಮುಂದುವರೆದಿದೆ. ಅದನ್ನು ಉಪಯೋಗಿಸಿಕೊಂಡು ಕನ್ಯೆಯಾಗೇ ನನ್ನದೇ ಮಗೂನ ಪಡೀತಾಯಿದ್ದೀನಿ. ಅಜ್ಜಿ... ನಿನಗೆ ಮಹಾಭಾರತದ  ಕುಂತಿ-ಪಾಂಡವರ  ಕಥೆ ಗೊತ್ತಿದೆಯಲ್ವಾ...ಇದೂ ಹಾಗೇನೇ... ಕೃಷ್ಣ-ಬಲರಾಮರ ಕಥೇಲಿ, ಬಲರಾಮ ಹೆಂಗೆ ದೇವಕೀ ಗರ್ಭದ ಬದಲು, ರೋಹಿಣಿಯ ಗರ್ಭದಲ್ಲಿ ಬೆಳೆದನೋ ಹಾಗೆ...ನನ್ನ ಅಂಶದಿಂದ ಹುಟ್ಟುವ ಮಗು ಬಾಡಿಗೆ ತಾಯಿ ಗರ್ಭದಲ್ಲಿ ಬೆಳೆಯುತ್ತೆ ಅಷ್ಟೇ. ಇನ್ನು ದೇವಕಿಗೆ ಹುಟ್ಟಿದ ಮಗೂನ ಯಶೋದಾ ಬೆಳಸಲಿಲ್ವಾ? ಹಾಗೇ ಬಾಡಿಗೆ ತಾಯಿ ಹೆತ್ತುಕೊಟ್ಟ ನನ್ನ ಮಗೂನ ನಾನು ಬೆಳಸ್ತೀನಿ...” ಒಂದೇ ಉಸಿರಿನಲ್ಲಿ ಹೇಳಿದಳು ಮಾನಸಿ.

“ಅಪ್ಪ ಯಾರೂಂತ ಗೊತ್ತಿಲ್ಲದೇ ಮಗೂನ ಪಡೆಯೋದು ಅಂದ್ರೇನು? ಮರ್ಯಾದೆಯಿಲ್ಲದೋರು ಅಂತಾರೆ....” ಕಿರುಚುತ್ತ ಕುರ್ಚಿಯಲ್ಲಿ ಕುಸಿದರು ವಸುಧಾ.
“ಅಮ್ಮಾ...ಬೇಜಾರು ಮಾಡ್ಕೋಬೇಡಾಮ್ಮ....ಈಗ ಕಾಲ ಬದಲಾಗಿದೆ. ಜಗತ್ತಿನಲ್ಲಿ ಎಷ್ಟೊಂದು ಜನ ಸಿನೆಮಾದವರು, ದೊಡ್ಡ ಶ್ರೀಮಂತರು, ಬೇರೆ ಜನಾನೂ ಈ ಥರ ಮಗೂನ ಮಾಡಿಕೊಂಡಿದ್ದಾರೆ...ಇದೇನು ತಪ್ಪಲ್ಲಮ್ಮಾ....ನಾನು ನೋಡೋಕೆ ಚೆನ್ನಾಗಿಲ್ಲಂತ ನನ್ನ ಮದುವೆಯಾಗೋಲ್ಲ ಅಂದ್ರಲ್ಲ, ಅದು ತಪ್ಪಲ್ವಾ? ಇಲ್ಲಾ ಬರೀ ನನ್ನ ಕೆಲಸ, ಸಂಬಳ ನೋಡಿ ಮದುವೆಗೆ ಒಪ್ಪಿಕೊಳ್ತಿದ್ರಲ್ಲಾ ಅದು ತಪ್ಪಲ್ವಾ?”

“ಅದೆಲ್ಲ ಸರಿ... ಫಾರಿನ್ ನವರು, ಸಿನೆಮಾದವರು, ದೊಡ್ಡ ಮಂದಿಯೆಲ್ಲ ಹೀಗೆ ಮಾಡ್ತಿದ್ದಾರೆ ಅಂತ ನಾವೂ ಮಾಡಿದ್ರೆ ಹೇಗೆ? ನಾವು ಬದುಕ್ತಾಯಿರೋ ಸಮಾಜನೇ ಬೇರೆ... ನಮಗೆ ಮರ್ಯಾದೆಯೇ ಜೀವನ...ಅದೇ ಹೋಯ್ತು ಅಂದ್ರೆ ಬದುಕೋಕೆ ಆಗಲ್ಲಮ್ಮ...” ನೊಂದು ನುಡಿದರು ವಾಸುದೇವ.
“ಅಪ್ಪ...ಎಷ್ಟು ದಿನಾಂತ ಇನ್ನೊಬ್ಬರನ್ನು ಮೆಚ್ಚಿಸೋಕೆ ಬದುಕಬೇಕು? ನಮಗಾಗಿ ನಾವು ಬದುಕೋದನ್ನು ಕಲೀಬೇಕು...ಅದಕ್ಕೇ ಈ ನಿರ್ಧಾರ ತೊಗೊಂಡಿರೋದು...ಮುಂದಿನ ವರ್ಷದಷ್ಟೊತ್ತಿಗೆ ಈ ಮನೇಲಿ ನನ್ನ ಮಗಳು ಅದೇ, ನಿಮ್ಮ ಮೊಮ್ಮಗಳು... ಅಜ್ಜೀ... ನಿನ್ನ ಮರಿಮೊಮ್ಮಗಳು ಆಡಿಕೊಂಡಿರ್ತಾಳೆ. ಆಗ ನಾನು ನಿನಗೆ ಕನಕಾಭಿಷೇಕನೂ ಮಾಡಿಸ್ತೀನಿ...” ಎನ್ನುತ್ತ ಮೆಟ್ಟಿಲು ಹತ್ತಿ ತನ್ನ ಕೋಣೆಗೆ ಹೋದಳು. ಲ್ಯಾಪ್-ಟಾಪ್ ಆನ್ ಮಾಡಿ ಮುದ್ದು ಮಗುವಿನ ಸ್ಕ್ರೀನನ್ನು ನೋಡುತ್ತ ಕುಳಿತಿದ್ದವಳಿಗೆ, ಗಾಂಧಿಬಜಾರಿನಲ್ಲಿ ಕಂಡ ಬೊಂಬೆಗಳು, ಬಣ್ಣದ ಆಟಿಕೆಗಳು, ಪುಟ್ಟ-ಪುಟ್ಟ ಫ್ರಾಕ್, ರೇಷ್ಮೆ ಲಂಗ, ಮಲ್ಲಿಗೆ ಮೊಗ್ಗಿನ ಜಡೆ ಕಣ್ಣ ಮುಂದೆ ಸುಳಿದವು.

# ಅಗಳಿಯ ಅವಾಂತರ



**ಪವಿತ್ರ ರಾಜೀವ್** , ನ್ಯೂಜೆರ್ಸಿ

ಅಂದು ದೀಪಾವಳಿ ಹಬ್ಬ. ಮನೆಯಲ್ಲಿ ವರ್ಷಾವಧಿ ಹಬ್ಬದ ಸಡಗರ. ಪ್ರತಿ ವರ್ಷದ ಹಾಗೆ ಹಬ್ಬದ ದಿವಸ ತಂದೆಯವರು ದೇವರಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ ಜಪ-ತಪಗಳನ್ನು ಮಾಡುತಿದ್ದರು. ಅಮ್ಮ ರುಚಿ-ರುಚಿಯಾದ ಚಕ್ಕುಲಿ, ನಿಪ್ಪಟ್ಟು, ಕಜ್ಜಾಯಗಳನ್ನು ಅಡುಗೆಮನೆಯಲ್ಲಿ ತಯಾರಿಸುತ್ತಿದ್ದರು. ಅಣ್ಣ ಮತ್ತು ನಾನು ಮನೆಯಂಗಳದಲ್ಲಿ ಚಂಡಾಟವನ್ನು ಆಡುತ್ತಾ ಸಂಜೆ ಪಟಾಕಿಗಳನ್ನು ಹೊತ್ತಿಸುವ ಯೋಜನೆಯಲ್ಲಿದ್ದೆವು. ದೀಪಾವಳಿ ಎಂದರೆ ನಮಗಂತೂ ಸಂಭ್ರಮ ಸಡಗರದ ಸಂಗತಿ, ಏಕೆಂದರೆ, ರುಚಿಯಾದ ತಿಂಡಿ-ತಿನಿಸು, ಹೊಸ ಬಟ್ಟೆ ಹಾಗು ಪಟಾಕಿಗಳು ಸಿಗುವುದೆಂಬ ಹಂಬಲ. ಪ್ರತಿ ವರ್ಷವೂ ನಾವು ಈ ದಿವಸಕ್ಕಾಗಿ ಅತಿ ಉತ್ಸಾಹದಿಂದ ಕಾಯುತ್ತಲಿರುತಿದ್ದೆವು.

ಹಬ್ಬದ ಹಿಂದಿನ ದಿವಸ ಸಂಜೆ, ತಂದೆಯವರು ನಮಗಾಗಿ ಹೊಸ ಬಟ್ಟೆಗಳು ಹಾಗು ವಿವಿಧ ರೀತಿಯ ಪಟಾಕಿಗಳನ್ನು ತಂದಿದ್ದರು. ಆ ಪಟಾಕಿಗಳನ್ನು ಮಾತ್ರ ಒಂದು ಕೋಣೆಯ ಅಟ್ಟದ ಮೇಲೆ ನಮಗೆಲ್ಲಾ ಎಟುಕದ ಹಾಗೆ ಜೋಪಾನವಾಗಿ ಇಟ್ಟಿದ್ದರು. ನನಗಂತೂ ತೀರಾ ಕುತೂಹಲ ಸ್ವಭಾವ, ಯಾರಿಗೂ ತಿಳಿಯದ ಹಾಗೆ ಇಟ್ಟಿದ್ದ ಆ ಪಟಾಕಿಗಳ ಡಬ್ಬವು ಹೇಗೋ ನನ್ನ ಕಣ್ಣುಗಳಿಗೆ ಬಿದ್ದವು. ನನ್ನ ಕುತೂಹಲವು ಹೆಚ್ಚಾಗಿ ಆ ಡಬ್ಬದಲ್ಲಿ ಯಾವ ಯಾವ ಪಟಾಕಿಗಳು ಇರಬಹುದೆಂಬ ಯೋಚನೆ ಅತಿಯಾಯಿತು. ಯಾರೂ ಇರದ ವೇಳೆನೋಡಿ ಆ ಡಬ್ಬವನ್ನು ನೋಡುವ ಎಂದು ಸಮಾಧಾನದಿಂದ ಆಟವಾಡಲು ಅಂಗಳಕ್ಕೆ ಹೋದೆನು. ಆಟವೆಲ್ಲಾ ಮುಗಿಸಿ ಮನೆಗೆ ಬರುವಷ್ಟರಲ್ಲಿಯೇ ಸಂಜೆಯಾಗಿ ತೀರಾ ಸುಸ್ತಾಗಿತ್ತು. ರಾತ್ರಿಯ ಭೋಜನ ಮುಗಿಸಿ ಪಟಾಕಿಯ ಗುಂಗಲ್ಲೇ ನಿದ್ರೆಗೆ ಜಾರಿದೆನು.

ಮರುದಿವಸ, ದೀಪಾವಳಿಯ ಹಬ್ಬದ ದಿನ. ಅಂಗಳದಲ್ಲಿ, ನಾನು ಮತ್ತು ಅಣ್ಣ ಚಂಡಾಟವನ್ನು ಆಡುತ್ತಾ ಕುಳಿತಿರುವ ಸಮಯದಲ್ಲಿ, ಮನೆಯ ಅಂಗಳದ ಗೇಟು ತೆರೆದ ಶಬ್ಧವಾಗಿ, ಅಲ್ಲಿ ನೋಡಲು ಊರಿನಿಂದ ನಮ್ಮ ಸೋದರ ಅತ್ತೆ- ಮಾವ ಹಾಗು ಅವರ ಮಕ್ಕಳು ಒಳಗೆ ಬರುವುದು ಕಂಡಿತು. ಅವರೆಲ್ಲರೂ ನಮ್ಮೊಂದಿಗೆ ಹಬ್ಬವನ್ನು ಆಚರಿಸಲು ಪ್ರತಿ ವರ್ಷವೂ ಬರುವ ವಾಡಿಕೆಯುಂಟು. ಅಂತೆಯೇ ಈ ವರ್ಷಕೂಡಾ ನಮ್ಮ ಮನೆಗೆ ಆಗಮಿಸಿದರು. ನೆಂಟರು ಬಂದದ್ದನ್ನು ಕಂಡು ಅಣ್ಣ ಮತ್ತು ನಾನು ಮನೆಯೊಳಗೆ ಓಡಿ ಅಪ್ಪ-ಅಮ್ಮನನ್ನು ಹೊರಗೆ ಕರೆದುಕೊಂಡು ಬಂದೆವು. ಅತಿಥಿಗಳನ್ನು ಕಂಡು ಅಪ್ಪ-ಅಮ್ಮಂದಿರಿಬ್ಬರು ಅವರ ಕ್ಷೇಮ ಸಮಾಚಾರವನ್ನು ವಿಚಾರಿಸಿ ಮನೆಯೊಳಗೆ ಬರಮಾಡಿಕೊಂಡು ಅವರನ್ನು ಸತ್ಕರಿಸಿದರು.

ಅದು ಮನೆಯವರೆಲ್ಲರೂ ಅತಿಥಿಗಳ ಸತ್ಕಾರದಲ್ಲಿ ನಿರತರಾಗಿದ್ದ ಸಮಯ. ಎಲ್ಲರೂ ಮನೆಯ ಛಾವಡಿಯಲ್ಲಿ ಮಾತನಾಡುತ್ತಾ ಕುಳಿತಿದ್ದರು. ಅಣ್ಣನು ನಮ್ಮ ಸೋದರತ್ತೆ-ಮಾವನ ಮಕ್ಕಳೊಂದಿಗೆ ಅಂಗಳದಲ್ಲಿ ಆಟವಾಡಲು ಹೊರಟನು. ಯಾರ ಗಮನವು ನನ್ನ ಮೇಲೆ ಇರಲಿಲ್ಲ, ಇದೆ ಸರಿಯಾದ ಸಮಯವೆಂದು ಮನದಲ್ಲಿ ನಿಶ್ಚಯಿಸಿ, ಪಟಾಕಿಗಳನ್ನು ತೆರೆದು ನೋಡುವ ಸಂಭ್ರಮದಲ್ಲಿದ್ದೆನು. ಅಟ್ಟದ ಮೇಲಿದ್ದ ಆ ಪಟಾಕಿಗಳನ್ನು ನೋಡುವ ಕುತೂಹಲದಿಂದ, ನಾನು ಆ ಕೋಣೆಯೊಳಕ್ಕೆ ಹೋಗಿ ಅಗಳಿಯನ್ನು ಗಾಬರಿಯಿಂದ ಬೇಗ- ಬೇಗ ಜಡಾಯಿಸಿದೆನು. ಒಂದೊಂದೇ ಹೆಜ್ಜೆ ಇಡುತ್ತಾ, ಕಿಟಕಿ ಏರಿ, ಸಜ್ಜೆಯ ಮೇಲೆ ಜಿಗಿದು, ಅಟ್ಟವನ್ನು ಕೈಯಿಂದ ಹಿಡಿದು ಮುಂದೆ ಸಾಗಿ ಹೇಗೋ ಹರಸಾಹಸ ಮಾಡಿ ಅಟ್ಟವನ್ನು ಏರಿದೆನು.

ಅಟ್ಟವನ್ನು ಏರಿದ ಕೂಡಲೇ ಸುಸ್ತಾಗಿ ಅಲ್ಲೇ ಕುಳಿತೆನು. ಸ್ವಲ್ಪ ಸಮಯದ ಬಳಿಕ ಮೆಲ್ಲನೆ ಅಂಬೆಗಾಲಿಡುತ್ತಾ ಮುಂದೆ ಸಾಗಿ ಆ ಪಟಾಕಿಯ ಡಬ್ಬವನ್ನು ತಲುಪಿದೆನು. ಅದನ್ನು ನೋಡಿದ ಕೂಡಲೇ ನನ್ನ ಕುತೂಹಲ ಹೆಚ್ಚಾಗಿ ಬೇಗ-ಬೇಗನೆ ಡಬ್ಬವನ್ನು ತೆರೆದು ನೋಡಲು, ಆಹಾ! ಸುರ್ಸುರ್ ಕಡ್ಡಿ, ಸರ ಪಟಾಕಿ, ಭೂಚಕ್ರ, ಲಕ್ಷ್ಮಿ ಪಟಾಕಿ, ಬಿಜಲಿ ಪಟಾಕಿ ಇನ್ನೂ ಮತ್ತಷ್ಟು. ನನ್ನ ಖುಷಿಗೆ ಪಾರವೇ ಇರಲಿಲ್ಲ. ಪಟಾಕಿಗಳನ್ನು ಕಂಡು ನನ್ನ ಮನಸ್ಸು ರಾಕೆಟ್ಟಂತೆ ಹಾರಿತು. ಹೀಗೆ ಸ್ವಲ್ಪ ಸಮಯ ಮಾಯಾಲೋಕದಲ್ಲಿ ಇದ್ದಹಾಗೆ ಭಾಸವಾಯಿತು. ನನ್ನ ಕುತೂಹಲವೆಲ್ಲವೂ ಖರ್ಚಾಗಿ ಇನ್ನೇನು ಅಟ್ಟದಿಂದ ಇಳಿಯಬೇಕೆಂದು ಕೆಳಗೆ ನೋಡಲು, ಪಾತಾಳವಿರುವುದೆಂಬ ಭಾವನೆಯುಂಟಾಗಿ ಎದೆ ನಡುಗಿತು. ರಾಕೆಟ್ಟಂತೆ ಹಾರುತಿದ್ದ ಹೃದಯದಲ್ಲಿ ಒಮ್ಮೆಗೆ ಲಕ್ಷ್ಮಿ ಪಟಾಕಿ ಸಿಡಿದಂತಾಯಿತು. ಹೆದರಿಕೆಯಿಂದ ಬೆವರಿ, ಬಸವಳಿದು, ನೊಂದು-ಬೆಂದು ಇಡೀ ಲೋಕವೇ ಕತ್ತಲಾದಂತಾಯಿತು. ಕಣ್ಣುಗಳು ಮಂಜಾಗಿ ಕಣ್ಣೀರು ಜಾರಿದವು. ಅಟ್ಟದ ಮೇಲೆ ಹತ್ತುವಾಗ ಇದ್ದ ಧೈರ್ಯ ಇಳಿಯಬೇಕೆನ್ನುವಾಗ ಇರಲಿಲ್ಲ. ಮನದಲ್ಲಿ ದಿಗಿಲುಂಟಾಗಿ ಏನು ತೋಚದಾಗಿ ಬಾಗಿಲಕಡೆ ನೋಡಲು ಅಗಳಿಯು ಹಾಕಿರುವುದನ್ನು ಕಂಡು ಬೇರೆ ದಾರಿಕಾಣದೆ ಜೋರಾಗಿ ಅಳಲು ಪ್ರಾರಂಭಿಸಿದೆನು. ನನ್ನ ಆ ಅಳುವು ಸುತ್ತಲೂ ನಾಲ್ಕು ಮನೆಗಳಿಗೆ ಕೇಳುವಷ್ಟು ದೊಡ್ಡದಾಗಿತ್ತು. ಮನೆಯವರೆಲ್ಲರೂ ನನ್ನ ಕೂಗು ಕೇಳಿ ಗಾಬರಿಯಿಂದ ಓಡಿ ಬಂದು ಕೋಣೆಯ ಹೊರಭಾಗದಿಂದ ನನ್ನನ್ನು ಮಾತನಾಡಿಸಿ ಕೋಣೆಯ ಬಾಗಿಲನ್ನು ಒಡೆಯಲು ಪ್ರಯತ್ನಿಸಿದರು. ಅದು ಸಫಲವಾಗಲಿಲ್ಲ. ಈ ಅವಸ್ಥೆಯಿಂದ ಮನೆಯವರಿಗೆಲ್ಲ ನಾನು ಮಾಡಿದ ಅವಾಂತರ ತಿಳಿಯಿತೆಂದು, ಹೊರಗೆ ಹೋದೊಡನೆ ಸರಿಯಾಗಿ ಪೆಟ್ಟು ಕೊಡುವರೆಂದು ನೆನೆದು ಮತ್ತಷ್ಟು ಹೆದರಿಕೆಯಾಯಿತು. ನನ್ನ ಅಳುವು ನಿಲ್ಲಲೇ ಇಲ್ಲ.

ಮನೆಯವರೆಲ್ಲರೂ ಬೇರೆ ದಾರಿಕಾಣದೆ, ಹೆದರಿ ನನ್ನನ್ನು ಹೊರಗಿನಿಂದಲೇ ಸಮಾಧಾನ ಮಾಡಲು ಮುಂದಾದರು, ಆದರೂ ನನ್ನ ಆಕ್ರಂಧನ ನಿಲ್ಲದೆ ಮುಗಿಲು ಮುಟ್ಟಿತು. ಹೀಗೆ ಸ್ವಲ್ಪ ಸಮಯ ಕಳೆಯಿತು. ನಂತರ ಅಮ್ಮ ಆ ಕೋಣೆಯ ಹೊರಭಾಗದ ಕಿಟಕಿಯ ಬಳಿಗೆ ಬಂದು ನನ್ನೊಂದಿಗೆ ಮಾತನಾಡಲು, ಅಮ್ಮನ ಮುಖವನ್ನು ಕಂಡು, ಅವಳ ಧ್ವನಿಯನ್ನು ಕೇಳಿ ನನಗೆ ಅಮೃತಪಾನ ಮಾಡಿದಂತಾಗಿ ಮರುಜೀವ ಬಂದಂತಾಯಿತು. ಹಾಗೆ ಮಾತನಾಡುತ್ತಲೇ ನನಗೆ ಧೈರ್ಯನೀಡಿ ಒಂದೊಂದೇ ಹೆಜ್ಜೆ ಕೆಳಗಿಡಲು ಮಾರ್ಗದರ್ಶನ ನೀಡಿದಳು. ಮೊದಲಿಗೆ ಅಂಬೆಗಾಲಿಡುತ್ತಾ ಅಟ್ಟದ ಕೊನೆಯ ಭಾಗಕ್ಕೆ ಬಂದು, ಕಿಟಕಿಯ ಕಂಬಿಯ ಮೇಲೆ, ಒಂದೊಂದೇ ಹೆಜ್ಜೆ ಇಳಿಯುತ್ತಾ, ಸಜ್ಜೆಯ ಮೇಲೆ ಕಾಲಿಟ್ಟು ಹೇಗೋ ಹರಸಾಹಸಮಾಡಿ ನನ್ನನ್ನು ಅಟ್ಟದಿಂದ ಕೆಳಗಿಳಿಯುವಂತೆ ಮನೆಯವರೆಲ್ಲರೂ ಪ್ರೇರೇಪಿಸಿದರು.

ಅಂತೂ ಅಟ್ಟದಿಂದ ಕೆಳಗಿಳಿದವನೇ, ಇನ್ನು ಈ ಪಟಾಕಿಯ ಸಹವಾಸ ಬೇಡವೆಂದು ಮನದಲ್ಲಿ ನಿಶ್ಚಯಿಸಿ ಅಳುತ್ತಾ ಅಮ್ಮನ ಬಳಿಗೆ ಓಡಿ ಅವಳನ್ನು ತಬ್ಬಿಕೊಂಡು ಬಿಕ್ಕಿ- ಬಿಕ್ಕಿ ಅತ್ತೆನು. ಅಳುತ್ತಾ ಇನ್ನು ಮುಂದೆ ಇಂತಹಾ ತಪ್ಪು ಮಾಡುವುದಿಲ್ಲವೆಂದು ಅಮ್ಮನಲ್ಲಿ ಕ್ಷಮೆಯಾಚಿಸಿದೆನು. ನಾನು ಹೊರಗೆ ಬರುವ ಸಮಯವನ್ನೇ ಕಾಯುತಿದ್ದ ತಂದೆಯವರು ಒಂದು ದೊಡ್ಡ ಬೆತ್ತವನ್ನು ಹಿಡಿದು ನನಗೆ ಮತ್ತಷ್ಟು ಪಟಾಕಿಗಳನ್ನು ಕೊಡುವ ಯೋಜನೆಯಲ್ಲಿದ್ದರು. ನನ್ನ ಹುಚ್ಚು ಸಾಹಸದಿಂದ ಹಬ್ಬದ ವಾತಾವರಣವನ್ನು ಬದಲಾಯಿಸಿ, ಎಲ್ಲರನ್ನು ಆತಂಕಕ್ಕೆ ಒಳಮಾಡಿದ್ದರಿಂದ, ಅಪ್ಪನಿಂದ ಒಂದೆರಡು ಪೆಟ್ಟುಗಳನ್ನು ತಿಂದು, ಇನ್ನು ಮುಂದೆ ಈ ತಪ್ಪುಗಳನ್ನು ಮಾಡಬಾರದೆಂಬ ಪಾಠವನ್ನು ಕಲಿತೆನು. ಕೆಲಸಮಯದ ನಂತರ, ಮನೆಯವರೆಲ್ಲರೂ ಅಳುತಿದ್ದ ನನಗೆ ಸಮಾಧಾನ ಹೇಳಿ, ಮುಂದೆಂದೂ ಈ ಅವಾಂತರಗಳನ್ನು ಮಾಡಿಕೊಳ್ಳಬಾರದೆಂದು ಸಂತೈಸಿದರು.

ಇಷ್ಟೊತ್ತಿಗಾಗಲೇ ಮಧ್ಯಾಹ್ನದ ಸಮಯವಾಗಿದ್ದರಿಂದ, ಅಮ್ಮ ಎಲ್ಲರಿಗೂ ವಿಶೇಷವಾದ ಹಬ್ಬದ ಭೋಜನವನ್ನು ಏರ್ಪಡಿಸಿದರು. ಎಲ್ಲರೂ ಅಮ್ಮಮಾಡಿದ ರುಚಿಯಾದ ತಿಂಡಿ-ತಿನಿಸುಗಳನ್ನು ಸವಿದು ಬಲು ಸಂತೋಷದಿಂದ ಹಬ್ಬವನ್ನು ಆಚರಿಸಿದೆವು. ಸಂಜೆಯ ವೇಳೆಗೆ ನಾವು ಮಕ್ಕಳೆಲ್ಲಾ, ಲಕ್ಷ್ಮೀಪಟಾಕಿ, ಸುರ್ ಸುರ್ ಕಡ್ಡಿ, ಹೂಕುಂಡ, ಸರಪಟಾಕಿಗಳನ್ನೆಲ್ಲ ಸಿಡಿಸಿ ಬಲು ಸಡಗರದಿಂದ ದೀಪಾವಳಿಯನ್ನು ಮನತುಂಬಿಕೊಂಡೆವು.
ಹೀಗಿತ್ತು ನಮ್ಮ ದೀಪಾವಳಿ ಹಬ್ಬದ ಸಂಭ್ರಮ. ಆ ಪಟಾಕಿಗಳನ್ನು ಸಿಡಿಸುವ ಹುಮ್ಮಸ್ಸಿನಲ್ಲಿ ಅಂದು ನಡೆದ ಘಟನೆಯು ಸ್ವಲ್ಪ ಮಟ್ಟಿಗೆ ಮರೆತು ಹೋಗಿತ್ತಾದರೂ, ಇಂದಿಗೂ ಆ ದಿನವನ್ನು ನೆನೆದರೆ ಹೆದರಿಕೆಯಿಂದ ಮೈ ಬೆವರುವುದಲ್ಲದೆ ಅದರಿಂದ ಕಲಿತ ಪಾಠವೂ ನನ್ನನ್ನು ಜಾಗೃತಗೊಳಿಸುತ್ತದೆ. ಒಮ್ಮೊಮ್ಮೆ ಬಾಲ್ಯದಲ್ಲಿ ನಡೆದ ಅನುಭವಗಳು ನಮ್ಮ ಜೀವನದಲ್ಲಿ ನಾವು ಬೆಳೆಯಲು ಸಹಕಾರಿಯಾಗುತ್ತದೆ, ಅಂತೆಯೇ ಈ ಅಗಳಿಯ ಅವಾಂತರದ ನೆನಪು ಎಂದೆಂದಿಗೂ ನನ್ನಲ್ಲಿ ಜೀವಂತವಾಗಿ ನನ್ನ ಜೀವನದ  ಮಾರ್ಗಸೂಚಿಯಾಗಿ ಒಂದು ವಿಭಿನ್ನ ನೆನಪಾಗಿ ಉಳಿದುಕೊಂಡಿದೆ.



# ಆರ್ದ್ರತೆ

**ಗೀತಾ ಭಟ್ ,** ಬೆಂಗಳೂರು

ತುಂಬಾ ದಿನದ ಮೇಲೆ ನಮ್ಮೂರಿಗೆ ಬಂದ ಅಂಬ್ಯುಲೆನ್ಸ್ ನ ಸೈರನ್ ಕೇಳೋಕಾಗದೆ ಕಷ್ಟ ಪಡ್ತಾ ಇದ್ದೆ. ಏನೋ ಮೈ ಕೈನಲ್ಲಿ ಎಲ್ಲಾ ಒಂತರ ನಡುಕ... ಇತ್ತಿತ್ತಲಾಗಿ ನನಗೆ ಇದೇನೂ ಹೊಸದಲ್ಲ... ಆದ್ರೂ ಆ ಟೈಮ್ ನಲ್ಲಿ ಮನಸ್ಸಿನ ಒಳಗಡೆ ಆಗೋ ತ್ರಾಸು ತಡೆದುಕೊಳ್ಳೋದು ಸ್ವಲ್ಪ ಕಷ್ಟನೇ. ಮೈತುಂಬಾ ಕೆಲಸದ ಹೊರೆ ಹೊತ್ಕೊಂಡು ರಾತ್ರಿ ಸುಸ್ತಾಗಿ ಕಣ್ಣು ಮುಚ್ಚಿದ್ರೂನೂ ನಿದ್ದೆ ಬರೆದೆ ಇರೋ ರೋಗ ಶುರುವಾಗ್ಬಿಟ್ಟಿದೆ...

ಇನ್ನೂ ಇಪ್ಪತ್ತೊಂಬತ್ತು ವರ್ಷಕ್ಕೆ ಕಾಲಿಡ್ತಾ ಇರೋ ಹುಡುಗಿಗೆ ಇದೇನೂ ರೋಗನಪ್ಪ... ಪಾಪ, ಅಂದ್ಕೊಂಡ್ರಾ...?? ಈ ಪ್ರೀತಿ ಅನ್ನೂ ಹುಚ್ಚಿಗೆ ರೋಗನಾ ಹಚ್ಚಿಸೋ ತಾಕತ್ತು ಇದೆ ಹಾಗೇ ಹತ್ತಿರೋ ರೋಗನಾ ವಾಸಿ ಮಾಡೋ ತಾಕತ್ತು ಇದೆ.....!

ನಾನಿವತ್ತು ಅವನ ಜೊತೆ ಕಳಿಬೇಕು... ಅವನ ಜೊತೆ ಕಳಿಬೇಕು ಅಂದ್ರೆ ನಾನು ಇವತ್ತು ಚೆನ್ನಾಗಿ ನಿದ್ದೆ ಮಾಡ್ಬೇಕು... ನಾನು ನಿದ್ದೆ ಮಾಡ್ಬೇಕು ಅಂದ್ರೆ ನಿದ್ದೆ ಮಾತ್ರೆ ತಗೋಬೇಕು!

ನಾನು, ಅವನು.... ಅವನು, ನಾನು... ಆಹ್! ಎಂತ ಚಂದ ಕಲ್ಪನೆ..! ಕಲ್ಪನೆನಾ....??? ಇಷ್ಟು ಬೇಗ...?? ಕೊನೆವರೆಗೂ ಇಬ್ಬರೂ ಜೊತೆಯಾಗಿ ಬಾಳೋಣ ಅಂತ ಕೈ ಕೈ ಹಿಡಿದು ಸಪ್ತಪದಿ ತುಳಿದು ದೊಡ್ಡವರ ಆಶೀರ್ವಾದದ ಅಕ್ಷತೆಯನ್ನ ತಲೆಯ ಮೇಲೆ ಹಾಕಿಸಿಕೊಂಡು ಜೊತೆಯಾಗಿ ಬದುಕಿದ್ದು ಬರೀ ಒಂದುವರೆ ವರುಷ... ಅಷ್ಟೇ! ನಿನಗಾದ್ರೂ ಏನು ಗೊತ್ತಿತ್ತು ಹೇಳು, ನನಗೆ ನೀನು ಪ್ರಾಮಿಸ್ ಮಾಡೋವಾಗ ನಿನ್ನನ್ನ ಇಲ್ಲಿ ಕಳಿಸಿದವರು ಇಷ್ಟು ಬೇಗ ವಾಪಾಸ್ ಕರೆಸಿಕೊಳ್ಳಬಹುದು ಅಂತ....!

ಬಸ್ಸಿನಲ್ಲಿ ಮರೆತು ಬಂದಿದ್ದ ನನ್ನ ಫೈಲ್, ಅದರಲ್ಲಿ ಇದ್ದ ಮಾರ್ಕ್ಸ್ ಕಾರ್ಡ್ ಮತ್ತೆ ಆಧಾರ್ ಕಾರ್ಡ್ ಅನ್ನ ಜೋಪಾನವಾಗಿ ಕಾಲೇಜ್ ಹತ್ರ ಬಂದು ಕೊಟ್ಹೋಗಿದ್ದೆ ನೀನು. ನನ್ನ ಫೈಲ್ ನಲ್ಲಿ ಸಿಕ್ಕಿರೋ ನಂಬರ್ ಗೆ ನೀನು ಕಾಲ್ ಮಾಡಿದಾಗ ನಾನು ಎತ್ಕೊಂಡಿರ್ಲಿಲ್ಲ... ಅದಕ್ಕೇ, ನೀನು ಮೂರರಿಂದ ನಾಲ್ಕು ಸಲ ಟ್ರೈ ಮಾಡಿದ್ದೆ.. ಅನ್ ನೌನ್ ನಂಬರ್ ಗೆ ವಾಪಾಸ್ ಕರೆ ಮಾಡೋ ಅಭ್ಯಾಸನೇ ಇಟ್ಕೊಂಡಿರದ ನಾನು ಆ ನಂಬರನ್ನ ನೆಗ್ಲೆಟ್ ಮಾಡಿದ್ದೆ.... ನೀನು ಐದನೇ ಸಲ ಮತ್ತೆ ಕಾಲ್ ಮಾಡಿ, ಮೇಡಂ ನಿಮ್ಮ ಆಧಾರ್ ಕಾರ್ಡ್ ಮತ್ತೆ 2nd PUC ಮಾರ್ಕ್ಸ್ ಕಾರ್ಡ್ ನನ್ನತ್ರ ಇದೆ ಅಂದಾಗ ಅದನ್ನ ಇಟ್ಕೊಳ್ಳೋಕೆ ನೀನ್ಯಾರೋ.... ಇನ್ನೊಂದು ಸಲ ಫೋನ್ ಮಾಡಿದ್ರೆ ಪೊಲೀಸ್ ಗೆ ಕಂಪ್ಲೇಂಟ್ ಮಾಡ್ತೀನಿ ನೋಡು ಅಂತ ನಿನಗೇ ಚೆನ್ನಾಗಿ ದಭಾಯಿಸೋಕೇ ಹೋಗಿದ್ದೆ. ಆಗ ನೀನು ಹೇಳಿದ್ದೆ, ಪೊಲೀಸ್ ಹತ್ರ ಹೋಗೋ ಮೊದಲು ನಿಮ್ಮ ಫೈಲ್ ನಿಮ್ಮತ್ರ ಇದೆಯಾ ಅಂತ ಚೆಕ್ ಮಾಡ್ಕೊಳ್ಳಿ ಅಂತ.... ಆಗ ನೆನಪಾಯ್ತು... ಬಸ್ ನಲ್ಲಿ ಬ್ಯಾಗಿನಿಂದ ಏನೋ ತೆಗಿಯೋಕೆ ಹೋಗಿ ಫೈಲ್ ಅನ್ನ ಅಲ್ಲೇ ಪಕ್ಕಕ್ಕೆ ಎತ್ತಿಟ್ಟು ಮರ್ತಿದೀನಿ .... ತಕ್ಷಣಕ್ಕೆ ಮೈಯೆಲ್ಲಾ ಬೆವತೋಯ್ತು.

ಆಮೇಲೆ ನೀನು ಮನೆ ಅಡ್ರೆಸ್ ಕೊಟ್ರೆ ಮನೆಗೇ ಬಂದು ನಿಮ್ಮ ಡಾಕ್ಯುಮೆಂಟ್ಸ್ ಅನ್ನ ಕೊಟ್ಹೋಗ್ತೀನಿ ಅಂತ ಹೇಳಿದ್ದೆ. ಆದ್ರೆ, ನಾನೇ ಮನೆ ಅಡ್ರೆಸ್ ಕೊಡೋಕೆ ಇಷ್ಟ ಇಲ್ಲದೆ, ನೆಕ್ಸ್ಟ್ ಡೇ ಕಾಲೇಜ್ ಹತ್ರ ಬಂದು ಕೊಡಿ ಅಂತ ಹೇಳಿದ್ದೆ. ಆಮೇಲೆ ಔಪಚಾರಿಕವಾಗಿ ಥ್ಯಾಂಕ್ಸ್ ಹೆಳಿ ಡಾಕ್ಯುಮೆಂಟ್ಸ್ ನ್ನ ನಿನ್ನಿಂದ ತಗೊಂಡಿದ್ದೆ.

ಅದಾಗಿ ಒಂದು ವಾರದಮೇಲೆ ನಮಗೆ ಗೊತ್ತಿಲ್ಲದೇನೆ ನಾವು ಮತ್ತೆ ಭೇಟಿಯಾಗಿದ್ದು ಫ್ರೆಂಡ್ಸ್ ಜೊತೆ ಪಿಕ್ಚರ್ ನೋಡೋಕೆ ಹೋದಾಗ. ನೀನೂ ನಿನ್ನ ಫ್ರೆಂಡ್ಸ್ ಜೊತೆ ಅದೇ ಥೀಯೇಟರ್ ಗೆ ಬಂದಿದ್ದೆ. ಮತ್ತೆ ಒಬ್ಬರನೊಬ್ಬರು ನೋಡಿ, ಸ್ಮೈಲ್ ಮಾಡಿ ಹಾಯ್ ಹೇಳಿಕೊಂಡಿದ್ವಿ. ನಾನು ಆವತ್ತು ಇನ್ನೊಂದು ಸಲ ನಿನಗೆ ಥ್ಯಾಂಕ್ಸ್ ಅಂದಿದ್ದೆ. ನೀನೂ ವಾಪಾಸ್ ನನಗೆ ಥ್ಯಾಂಕ್ಸ್ ಅಂದಿದ್ದೆ. ನನಗ್ಯಾಕೆ ಥ್ಯಾಂಕ್ಸ್ ಅಂತ ಕೇಳಿದಾಗ, ನೀವು ಡಾಕ್ಯುಮೆಂಟ್ಸ್ ಕಳಕೊಂಡಿದ್ದಕ್ಕೆ ಅಂತ ಹುಳಿ ಹುಳಿ ನಗು ನಕ್ಕಿದ್ದೇ. ನನ್ನ ಮುಖದಲ್ಲಿನ ಕ್ವೆಶ್ಚನ್ ಮಾರ್ಕ್ ಎಕ್ಸ್ಪ್ರೆಶನ್ ನೋಡಿ, ಹೇಯ್.. ಏನು ಇಲ್ಲ ಬಿಡಿ, ಸುಮ್ನೆ ತಮಾಷೆ ಮಾಡಿದೆ ಅಂತ ಬೇರೆ ಏನೋ ಹೆಳಿ ಮಾತು ಮರೆಸಿದ್ದೆ...

ನೆಕ್ಸ್ಟ್ ಡೇ ಬೆಳಿಗ್ಗೆ ಕಾಲೇಜ್ ಗೆ ಹೋಗ್ತಾ ಮೊಬೈಲ್ ಓಪನ್ ಮಾಡಿದ್ರೆ ನಿನ್ನ ಗುಡ್ ಮಾರ್ನಿಂಗ್ ಮೆಸೇಜ್ ಪಾಪ್ ಅಪ್ ಆಗ್ತಾ ಇತ್ತು. ಒಂದು ಸಲ ನನ್ನ ಕಣ್ಣನ್ನ ನನಗೇ ನಂಬೋಕೆ ಆಗಿಲ್ಲ... ವಾಪಾಸ್ ರಿಪ್ಲೈ ಮಾಡೋಣ ಅಂತ ಹೋದವಳು, ಹಾಗೇಲ್ಲ ಹುಡುಗರು ಫಸ್ಟ್ ಟೈಮ್ ಮಾಡೋ ಗುಡ್ ಮಾರ್ನಿಂಗ್ ಮೆಸೇಜ್ ಗೆಲ್ಲ ರಿಪ್ಲೈ ಮಾಡ್ಬಾರ್ದು ಅನ್ನೋ ಹೆಣ್ಣುಮಕ್ಕಳ ಅಲಿಖಿತ ನಿಯಮನ್ನ ಗಟ್ಟಿ ಮನಸ್ಸು ಮಾಡಿ ಪಾಲಿಸಿದೆ.

ನೆಕ್ಸ್ಟ್ ಡೇ ಮಾರ್ನಿಂಗ್ ಅದೇ ಎಕ್ಸ್ಪೆಕ್ಟೇಶನಲ್ಲಿ ಮೊಬೈಲ್ ಓಪನ್ ಮಾಡಿದ್ರೆ ಏನೂ ಇರ್ಲಿಲ್ಲ... ಯಾಕೋ ಬೇಜಾರ್ ಆಯಿತು..ಮೂರು ದಿನದವರೆಗೂ ಕಾದು ನೋಡಿದೆ... ಉಹುಮ್ಮ್.. ಏನೂ ಇಲ್ಲ.. ಆಮೇಲೆ ತಡೆದುಕೊಳ್ಳೋಕೆ ಆಗದೆ ನಾಲ್ಕನೇ ದಿನ ಬೆಳಿಗ್ಗೆ ನಾನೇ ಗುಡ್ ಮಾರ್ನಿಂಗ್ ಟೈಪ್ ಮಾಡಿ ಸೆಂಡ್ ಬಟನ್ ಜಸ್ಟ್ ಟಚ್ ಮಾಡಿದ್ದೆ... ಆಗ಼್ೇ ರಿಪ್ಲೈ ಬಂದಿತ್ತು... ನನ್ನ ಗುಡ್ ಮಾರ್ನಿಂಗ್ ನಿಮಗೆ ತಲುಪೋಕೆ ನಾಲ್ಕು ದಿನ ಬೇಕಾಯ್ತು ಅಂತ. ಅಬ್ಬಾ! ಅಷ್ಟು ಫಾಸ್ಟ್ ರಿಪ್ಲೈ ನೋಡಿ ನನ್ನ ಎದೆ ಹೇಗೆ ಹೊಡೆದುಕೊಳ್ತಾ ಇತ್ತು ಅಂದ್ರೆ, ಈಗ ನೆನಪಿಸಿಕೊಂಡರೂ ಅದೇ ಫೀಲ್...... ಅದನ್ನ ಓದಿ ಹಾಗೇ ಕಣ್ಣನ್ನ ಗಟ್ಟಿಯಾಗಿ ಮುಚ್ಚಿ ಆ ಖುಷಿಯನ್ನ ಎಕ್ಸ್ಪ್ರೆಸ್ ಮಾಡಿದ್ದೆ.

ಆಮೇಲೆ ಹೀಗೆ ಹಾಳು ಮೂಳೂ ಚ್ಯಾಟ್ ಮಾಡ್ಕೊಂಡು ನನಗೆ ನೀನು ಫ್ರೆಂಡ್ ಆಗೋ ಮೊದ್ಲೇ ಲವರ್ ಆಗ್ಬಿಟ್ಟೆ!

ನನ್ನ ಡಿಗ್ರಿ ಮುಗಿದು ಮನೆನಲ್ಲಿ ಮದುವೆ ಮಾಡೋಕೆ ನೋಡ್ತೀನಿ ಅಂದಾಗ, ಆಗಷ್ಟೇ ಲಾ (Law) ಓದಿ ಮುಗಿಸಿದ್ದ ನೀನು ನನ್ನ ಕೈ ಹಿಡಿದು ಕೇಳಿಕೊಂಡಿದ್ದೆ... ನನ್ನ ಮೇಲೆ ನಂಬಿಕೆ ಇದ್ರೆ, ಇನ್ನೊಂದೆರಡು ವರುಷ ಹೆಗದ್ರೂ ಮಾಡಿ ನಿನ್ನ ಮದುವೆನಾ ಮುಂದುಡು. ಕೈನಲ್ಲಿ ಸ್ವಲ್ಪ ದುಡ್ಡು ಇಟ್ಕೊಂಡು ಬಂದು ನಿನ್ನ ಅಪ್ಪ ಅಮ್ಮನ ಹತ್ರ ಮಾತಾಡ್ತೀನಿ ಅಂತ.

ಇನ್ನೂ, ಪ್ರಾಕ್ಟೀಸ್ ಅದು ಇದು ಅಂತ ನಿನ್ನ ಅಮ್ಮನ ದುಡ್ಡಿನಲ್ಲೆ ಬದುಕ್ತಾ ಇದ್ದ ನಿನ್ನಮೇಲೆ ನಂಬಿಕೆ ಇಡೋ ಧೈರ್ಯ ಮಾಡಿ ನನ್ನ ಅಪ್ಪ ಅಮ್ಮನ ಹತ್ರ ಜಗಳ ಆಡಿ, ಎರಡು ವರುಷ ಮದುವೆ ಆಗೋಲ್ಲ, ಬೇಕಿದ್ರೆ ನೀವು ತಂಗಿ ಮದುವೆನಾ ಮೊದಲು ಮಾಡಬಹುದು ಅಂತ ಹೇಳಿ ಅವರಿಗೆ ಬೇಜಾರ್ ಮಾಡಿ ಒಂದು ಚಿಕ್ಕ ಕೆಲಸಕ್ಕೆ ಸೇರಿದ್ದೆ.

ನೀನೂ ಪಾಪ, ಅದೇನೇನೋ ಕಸರತ್ತು ಮಾಡಿ, ಡೇ ಟೈಮ್ ಪ್ರಾಕ್ಟೀಸ್.. ಇವಿನಿಂಗ್ ಟ್ಯೂಷನ್ ಹೇಳೋದು... ಇನ್ಯಾರಿದ್ದೋ ಚಿಕ್ಕಪುಟ್ಟ ಆಫೀಸ್ ಕೆಲಸ ಮಾಡಿಕೊಡೋದು, ಅದು ಇದು ಅಂತ ಎಷ್ಟು ಒದ್ದಾಡ್ತಾ ಇದ್ದೆ. ನೋಡೋಕೆ ಕಷ್ಟ ಆಗ್ತಾ ಇದ್ರು, ಮುಂದೆ ಜೊತೇಲಿ ಬಾಳೋ ಕನಸಿಗೆ ಇದು ಅನಿವಾರ್ಯವಾಗಿತ್ತು!
ನಾವಿಬ್ರು ಮದುವೆ ಆದಾಗ ನಮ್ಮ ಪಕ್ಕದ ಮನೆ ಆಂಟಿ ಹೇಳಿದ್ರಂತೆ... ನೋಡ್ರಿ, ಲವ್ ಅಂದ್ರೆ ಹಿಂಗ್ ಇರಬೇಕು. ಬರೀಕೈನಲ್ಲಿ ಇದ್ದ ಹುಡುಗ ಎರಡು ವರುಷದಲ್ಲಿ ಸ್ವಂತ ಮನೆ ತಗೋಳ್ಳೋ ಅಷ್ಟು ಬೆಳದಿದಾನೆ... ನಿಮ್ಮ ಹುಡುಗಿ ಅದ್ರಷ್ಟವಂತೆ ಕಣ್ರೀ ಅಂತ.

ನಾವಿಬ್ರು ಕಚ್ಕೊಂಡು ಮಲಗ್ತಿದ್ದ ಚಂದಕ್ಕೆ ಸಿಂಗಲ್ ಬೆಡ್ ಮಂಚನೇ ದೊಡ್ಡ ಅನಿಸೋದು.... ಅಂತದ್ರಲ್ಲಿ ನೀನು ಕಿಂಗ್ ಸೈಜ್ ಕಾಟ್ ಮಾಡ್ಸಿದ್ದೆ... ನಾನು ಇದು ತುಂಬಾ ದೊಡ್ಡದಾಯ್ತು ಕಣೋ ನಮಗೆ ಅಂದಾಗ, ಇರ್ಲಿ ಬಿಡು.. ನಾಳೆ ನಮಗೆ ನಾಲ್ಕು ಮಕ್ಕಳಾದ್ರೆ ಬೇಕಾಗುತ್ತೆ ಅಂತ ನೀನು ನನ್ನ ಮೂಗು ಹಿಂಡಿ ಮುದ್ದು ಮಾಡಿದ್ದೆ. ಹುಟ್ಟೋ ಮಕ್ಕಳನ್ನೆಲ್ಲ ಇಲ್ಲೆ ಮಲಗಿಸಿಕೊಂಡ್ರೆ, ಆಮೇಲೆ ತಮ್ಮ ಕಥೆ ಏನೋ ಅಂತ ಕೇಳಿದ್ರೆ, ಮಕ್ಕಳನ್ನ ಇಲ್ಲಿ ಮಲಗಿಸಿ ನಾವು ಸಿಂಗಲ್ ಬೆಡ್ ಗೆ ಶಿಫ್ಟ್ ಆಗ್ಬಿಡೋಣ ಅಷ್ಟೇ ಅಂತ ಕಾಲು ಎಳೀತಾ ಇದ್ದೆ ನೀನು........

ಅದು ಹೇಗೆ ಒಂದೂವರೆ ವರ್ಷ ಕಳಿತು ಅಂತಾನೇ ಗೊತ್ತಾಗಿಲ್ಲ ನೋಡು..!

ಆವತ್ತು ಅದೇನೋ ಸರ್ ಪ್ರೈಸ್ ಇದೆ ನಿನಗೆ ಅಂತ ಬೈಕ್ ನಲ್ಲಿ ಕರ್ಕೊಂಡು ಹೊರಟ್ಯಲ್ಲ... ನಾನು ನಿನಗೆ ಹೇಳಿದೆ, ಆ ಹೆಲ್ಮೆಟ್ ಬೆಲ್ಟನ್ನ ಸರಿಯಾಗಿ ಲಾಕ್ ಮಾಡ್ಕೊ ಅಂತ... ಆದ್ರೆ ನೀನು ಕೇಳ್ಬೇಕಲ್ಲ....ಅಯ್ಯ.. ಇಲ್ಲೆ ಹೋಗೋದು... ಸುಮ್ನೆ ಬಾ ಅಂತ ಅವಸರ ಮಾಡಿ ಹೊರಟೆ. ರಿಂಗ್ ರೋಡ್ ನ್ನ ಜಸ್ಟ್ ಟಚ್ ಮಾಡಿದ್ವಿ.. ಅವನ್ಯಾವೋನೋ ದೊಡ್ಡ ಗೂಡ್ಸ್ ಗಾಡಿಯವನು ಇನ್ನೊಂದು ಗಾಡಿನ ಓವರ್ ಟೇಕ್ ಮಾಡೋಕೆ ಹೋಗಿ ನಿನ್ನನ್ನ ತನ್ನ ಗಾಡಿ ಕೆಳಗೆ ಎಳ್ಕೊಂಡುಬಿಟ್ಟಿದ್ದ...........

ಬ್ಲಡ್ ಟೆಸ್ಟ್ ಗೆ ತಗೋಳ್ಳೋ ರಕ್ತ ಕೂಡ ನೋಡೋಕೆ ಆಗದೆ ಭಯ ಪಟ್ಕೊಂಡು ಕಣ್ಣು ಮುಚ್ಕೊತಾ ಇದ್ದ ನನ್ನನ್ನ ನಿನ್ನ ರಕ್ತದಿಂದ ತೊಯಿಸಿಬಿಟ್ಟಿದ್ದೆ ನೀನು.....

ಆವತ್ತು ನಾನು ಅಂಬ್ಯುಲೆನ್ಸ್ ನಲ್ಲಿ ಕಿರಿಚಿತ ಇದ್ದಿದ್ದು ಅದರ ಸೈರನ್ ಗಿಂತ ಜೋರಾಗಿತ್ತು... ನನಗೆ ನೀನು ಬೇಕು ಅನ್ನೋ ಆ ನನ್ನ ಆಕ್ರಂದನ ಆಸು ಪಾಸು ಇರೋವರಿಗೆಲ್ಲ ಕೇಳಿಸಿತ್ತು... ಮೇಲೆ ಇರೋ ದೇವರಿಗೊಂದು ಬಿಟ್ಟು!!!!

ಕಣ್ಣು ಮುಚ್ಚಿ ನಿದ್ದೆ ಮಾಡಿದವಳ ಕನಸಿನ ತುಂಬಾ ನೀನೇ ಇರಬೇಕು ಅನ್ನೋ ಆಸೆ. ನನ್ನ ಕನಸಿನ ಲೋಕದಲ್ಲಿ ಬರೀ ನಾನು ನೀನು ಇಬ್ಬರೇ ... ನಮ್ಮದೇ ಜಗತ್ತು.... ಅದೇ ಕಣ್ಣು ಬಿಟ್ಟರೆ, ನೀನಿಲ್ಲದ ಖಾಲಿ ಪ್ರಪಂಚದಲ್ಲಿ ಮತ್ತದೇ ಯಾಂತ್ರಿಕ ಬದುಕು...........!

# ಕವನಗಳು

ಗ್ರೀಷ್ಮ ಗಾಯನ



# ಪದ್ಯ ಕಾಲ

## ಬಿ. ರ್. ಲಕ್ಷ್ಮಣ್ ರಾವ್

ಪದ್ಯಕಾಲ

### ..ರೆ



ಕರೆಯಬೇಡ ಸುಖಿಯೆಂದು
ಯಾರನ್ನೂ ನೀನು
ಆವ ತೀರುವ ತನಕ;
ಯಾವ ಕ್ಷಣ ಹೇಗೋ
ಯಾರು ಬಲ್ಲರು
ಎದುರಾಗುವ ತನಕ?

ಸೆಟೆದು ನಿಂತ ತೆಂಗಿನಮರ
ಲಟಕ್ಕೆಂದು ಉರುಳಬಹುದು
ಸಿಡಿಲು ಬಡಿದರೆ;
ನಳನಳಿಸುವ ಕಣಿವೆಯ ಮನೆ
ಹೂತು, ಗುಪ್ಪೆಯಾಗಬಹುದು
ಗುಡ್ಡ ಜರಿದರೆ.

ಗೊನೆ ಮಾಗಿದ ಬಾಳೆತೋಟ
ನಿರ್ನಾಮವಾಗಬಹುದು
ಕಾಡಾನೆ ಹೊಕ್ಕರೆ;
ಸುಖ ಪ್ರವಾಸ ದಿಕ್ಕೆಡಿಸುವ
ಕಗ್ಗಾಡಾಗಬಹುದು, ದಾರಿ
ಕವಲು ಒಡೆದರೆ.

ಎಂಥ ಚೆಂದ ಸಂಬಂಧವೂ
ಒಳಗೊಳಗೇ ಕೊಳೆಯಬಹುದು
ಹುಳ ನುಸುಳಿದರೆ;
ಅಮರಾವತಿ ವರ್ಣಚಿತ್ರ
ವಿಕಾರಗೊಳ್ಳಬಹುದು, ವಿಧಿ
ಮಸಿಯ ಬಳಿದರೆ;
ನಿಜ,
ಇಷ್ಟಾಗಿಯೂ ಸುಖವಲ್ಲ
ಸೋವಿ,
ಅನ್ನುತ್ತಾನೆ
ಅನುಭಾವಿ



- ಬಿ.ಆರ್.ಲಕ್ಷ್ಮಣರಾವ್



# ಸಹನೀಯವಾಗಿರುವವರೆಗೆ

**ಎಂ.ವಿ. ಶಶಿಭೂಷಣ ರಾಜು,** ಪೆನ್ಸಿಲ್ವೇನಿಯ

ಬೇಕು
ಒಂದು ಕಾಲ, ಒಂದು ಬೆಳಕು, ಒಂದು ಜೀವ
ಜೊತೆಯಾಗಲು

ಮತ್ತು ಜೊತೆಮಾಡಿಕೊಳ್ಳಲು, ಅವಸರವೇನಿಲ್ಲ
ಸಹನೀಯವಾಗಿರುವವರೆಗೆ

ಎಲ್ಲೆಲ್ಲೋ ಇದ್ದು ಒಂದು ಭರವಸೆ ಕೊಟ್ಟರೂ ಸಾಕು,
ಮೋಡ ತಿಳಿಯಾದಾಗ

ಪಳಕ್ಕನೆ ಮಿಂಚುವ ಬೆಳಕಿನಂತೆ, ಹರಡಿದರೂ
ಸಾಕು, ಮುಂಬರೆಯುವ

ಮಬ್ಬಿಗೆ ಒಂದು ಸಣ್ಣ ಹೆದರಿಕೆ ಹುಟ್ಟಿಸಲು
ದಾರಿದೀಪವಾಗಲು,

ಗುರಿಮುಟ್ಟಿ ಸುಧಾರಿಸಿಕೊಳ್ಳಲು ಅಥವಾ
ದಾರಿಕಾಣಿಸಲು, ಮನಸಿಗೆ ಜೊತೆ

ಅನನ್ಯ, ಅನೂಹ್ಯ, ಅದ್ಭುತ, ಅಗಾಧ
ಸ್ವಲ್ಪ ಮಧುರ ಭಾವನೆ ಅಲೌಕಿಕ

ಕಾಲ ಕರಗಿದರೂ, ದೇಹ ದಹಿಸಿದರೂ
ಅದೃಶ್ಯ ಕುರುಹೊಂದು

ಉಳಿದು ಅನುಭವಕ್ಕೆ ನಿಲುಕಿಯೇ
ನಿಲುಕುತ್ತದೆ



**ಮಧುಕರ್ ರಾವ್,** ಬೆಂಗಳೂರು

ಸರ್ವಾಧಿಕಾರದ ಧೋರಣೆ
ಸರ್ವರೂ ಧಿಕ್ಕಾರದ ಮುನ್ಸೂಚನೆ.

---

ಅವಳು ಇದ್ದಕ್ಕಿದ್ದಂತೆ ನಾಪತ್ತೆ,
ಎಲ್ಲರ ದೂರ – ದುರಾಲೋಚನೆಯ ಆಪತ್ತೆ,
ಹಾಗೇನಾದರೂ ಆಯಿತೇ ಅನ್ನುವ ವಿಪತ್ತೆ,
ಮನೆಯವರಗೆಲ್ಲ ಬರುತ್ತಾಳೆ ಎನ್ನುವ ಅರಿವಿತ್ತೆ,
ಒಂದಿನ ಎಲ್ಲರ ಮುಂದೆ ಅವಳ ಜೊತೆ ನಾ ಪತ್ತೆ.

---

ಮೂಗಿಗೆ ಮಣ್ಣಿನ ವಾಸನೆ ಬಂದರೆ, ಮಳೆಯ ಮುನ್ಸೂಚನೆ.
ಮೂಗಿಗೆ ಠಾರ್ ವಾಸನೆ ಬಂದರೆ, ಚುನಾವಣೆ ಮುನ್ಸೂಚನೆ.

---

ಗೆಳೆಯನ ಗೆಳೆತನ ಒಪ್ಪಿ ಬಯಸಿದರೆ,
ಗೆಳೆಯನ ಸಹಾಯ ಉಪ್ಪಿನಂತೆ ಬಳಸಿದರೆ,
ಗೆಳೆಯನ ಸ್ನೇಹ ಮುಪ್ಪಿನವರೆಗೂ ಬೆಳೆಯುತ್ತದೆ

---

ಆಡುವ ಒಂದು ಸಣ್ಣ ಮಾತು ಸಾವರಿಸಿಕೊಳ್ಳಬಹುದು,
ಆಡುವ ಒಂದು ಸಣ್ಣತನದ ಮಾತು ಸಾವನ್ನು ಆರಿಸಿಕೊಳ್ಳಬಹುದು.

## ಶೀರ್ಷಿಕೆ:- ಹಣ

ಓ ಹಣವೇ, ನೀನೆಷ್ಟು ದುಬಾರಿ,

ಇದ್ದು ಇಲ್ಲದಂತಿರುವ ಸೋಮಾರಿ,

ಬಂದು ಹೋದಂತಿರುವ ಅಲೆಮಾರಿ,

ಕೊಟ್ಟು ತೆಗೆದುಕೊಳ್ಳುವ ವ್ಯಾಪಾರಿ,

ಸುಳ್ಳೇ ನಿಜವೆನ್ನುವ ಭಂಡ ರಿ,

ಎಲ್ಲರಲ್ಲಿದ್ದು ಎಲ್ಲೋಹೋಗುವ ಸಂಚಾರಿ,

ನ್ಯಾಯದ ಮನೆಯಲ್ಲಿ ಜಾಸ್ತಿ ದಿನ ಇದ್ದರೆ ಅಚ್ಚರಿ,

ಬೇನಾಮಿ ಹೆಸರಲ್ಲಿ ಬೆಚ್ಚಗಿರ್ತೀರಿ,

ದುಡಿದು ಕೂಡಿಟ್ಟ ಜೇಬಿಗೆ ಹಾಕುವೆ ಕತ್ತರಿ,

ಕುರುಡು ಕಾಂಚಾಣದ ಓಹ್ ಬಿತ್ತರಿ,

ಕೂಲಿ ನಾಲಿ ಮಾಡೋರಿಗೆ ಕಷ್ಟ ಕೊಡ್ತೀರಿ,

ದೊಡ್ಡವರ ತಪ್ಪನ್ನ ಮುಚ್ಚುವ ಪರಿಹಾರಿ,

ಭ್ರಷ್ಟರ ಮನೆ ನೋಡದೆ ನುಸುಳುವ ಕಳ್ಳ ದಾರಿ,

ಗಾದೆ ಸುಮ್ನೆ ಅಲ್ಲ ಹಣ ಅಂದ್ರೆ ಹೆಣ ಬಾಯ್ಬಿಡುತ್ತೆರಿ,

ನಿನಗ್ಯಾಕೆ ಬೇಕು ಈ ಉಸಾಬರಿ?

ಲಕ್ಷಿಯ ಹೆಸರಲ್ಲಾಗುತ್ತೆ ನಿನ್ನ ಅಲಂಕಾರದ ತಯಾರಿ,

ಪೂಜಿಸಿ ಭಜಿಸೋಣ ಪಾನಕ ಕೋಸಂಬರಿ.

ನಾಳೆ ಮರೆತು ಬದುಕೋಣ ನೋ ವರಿ.

# ಪ್ರವಾಸ ಕಥನ

ಗ್ರೀಷ್ಮ ಗಾಯನ



# ಅಂಟಾರ್ಟಿಕ್ ಪ್ರವಾಸ

**ನಾಗಲ್ ಶಶಿಧರ , ನ್ಯೂಜೆರ್ಸಿ**

ನಾಗಲ್ ಶಶಿಧರ ಮತ್ತು ಶಾಂತ ಶಶಿಧರ:

ನಮ್ಮ ಅಂಕಿತವನ್ನು ೭ನೇ ಖಂಡ ಅಂಟಾರ್ಟಿಕದಲ್ಲಿ ಸಂಕೇತಿಸಿ ಸವಿ ನೆನಪುಗಳನ್ನು ಕೊಂಡುಬಂದಿದ್ದಾರೆ.ಕಳೆದ ಶೀತಕಾಲದಲ್ಲಿ ಅಮೇರಿಕಾದ ನ್ಯೂಜರಸಿಯ ನ್ಯೂಪ್ರಾವಿಡೆನ್ಸ್ ನಗರದವರಾದ

ಬೆಂಗಳೂರಿನ ಶಶಿಧರ ಮತ್ತು ಅವರ ಧರ್ಮಪತ್ನಿ ಶಾಂತ ಶಶಿಧರರವರು ಸ್ವತಂತ್ರ ಭಾರತದ ಶ್ರೀಧ್ವಜದೊಡನೆ ದಕ್ಷಿಣಧ್ರುವದಬಳಿ ಇರುವ ಅಂಟಾರ್ಟಿಕ್ ಉಪಖಂಡಕ್ಕೆಪ್ರವಾಸ ಮತ್ತು ಶೋಧನೆಗಾಗಿ ಪ್ರಯಾಣಮಾಡಿದರು.  ದಕ್ಷಿಣ ಅಮೆರಿಕಾದ ಆಂಡಿಸ್ ಬೆಟ್ಟಗಳು ಅಂಟಾರ್ಕ್ಟಿಕಾದ ಮಹಾಸಾಗರದಲ್ಲಿ ಮುಂದುವರಿಯುತ್ತದೆ. ಈ ಪ್ರಕೃತಿಯ ಸೌಂದರ್ಯ ವರ್ಣಿಸಲು ಅಸಾಧ್ಯ!

ಅವರ ಪ್ರಯಾಣವು ಭೂಮಂಡಲದ ದಕ್ಷಿಣ ಅಂತ್ಯ ಭಾಗದಲ್ಲಿರುವ ದಕ್ಷಿಣಾಮೇರಿಕಾದ ಉಶ್ಯಾಯ (Ushuaia) ಎಂಬ ದ್ವೀಪದಿಂದಆರಂಭವಾಯಿತು. ನಂತರ ಗ್ರೇಯ್ಟ್ವಿಕನ್ (Grytviken) ಡಿಸೆಪ್ಸನ್ (DeceptionIsland) ದ್ವೀಪ, ಅರ್ಧ ಚಂದ್ರದ್ವೀಪ HalfMoonIsland, ಫಾರ್ಚುನ ಬೇ (Fortunabay) ಮತ್ತು ಇತರ ದ್ವೀಪಗಳನ್ನು  ನೋಡಿ  ಅವರು  ಅಂಟಾರ್ಟಿಕ್ ಪರ್ಯಾಯವನ್ನು ತಲುಪಿದರು. ಅವರ ಪ್ರಯಾಣದಲ್ಲಿ ಕ್ರಿಸ್ಮಸ್ ಆಚರಣೆ ಫಾಲ್ಕ್ ಲ್ಯಾಂಡ್ ದ್ವೀಪದ (Falk Land Island –Islas Malvinas) ಚುರ್ಚಲ್ಲಿ ಸುಗಮವಾಗಿ ನಡೆಯಿತು. ಹೊಸ ವರ್ಷದ (New Year Celebrations) ಸಮಾರಂಭ ಹಡಗಿನಲ್ಲಿ ಚೆನ್ನಾಗಿ ನಡೆಯಿತು. ಶಾಂತ ಅವರು ಹಾರ್ಮೋನಿಕಾ (Harmonica) ನುಡಿಸಿದರು.

ಅವರು ವಿವಿಧವರ್ಣ ಮತ್ತು ಗಾತ್ರಗಳ ಪೆನ್ಗ್ವಿನ್ಗಳನ್ನೂ(penguins)ಸೀಲ್ಗಳನ್ನೂ (Seals) ಮತ್ತೂ ಅನೇಕಬಣ್ಣಗಳ ಪಕ್ಷಿ ಗಳನ್ನೂವಿಸ್ತಾರಪ್ರದೇಶ ಪರ್ಯಂತ ಈಕ್ಷಿಸಿದರು. ಪೆಂಗಿನ್ಸ್ಗ(Penguins) ಗಳನ್ನ ಕೊಂದು  ತಿನ್ನುವ  ಅಲ್ಬಾಟ್ರೋಸ್ ಬರ್ಡ್ಸ್(albatross 5 feet longbirds) ನೋಡಲು ಬಹಳ ಚಿಂತಾಜನಕವಾಗಿತ್ತು.






ಇದಲ್ಲದೆ ಅವರಿಗೆ ಅನೇಕ ರಾಷ್ಟ್ರಗಳ ಅಂಟಾರ್ಟಿಕ್ ಸಂಶೋಧನಾಲಯಗಳನ್ನು ಶೋಧನೆ ಬಗ್ಗೆ ಅಲ್ಲಿನ ಅಪೂರ್ವ ಅಧಿಕಾರಿಗಳೊಡನೆ ಸಂಶೋಧನೆ ಮತ್ತು ಪ್ರದರ್ಶನ ವಸ್ತುಳ ಬಗ್ಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಅವರಿಗೆ ಭಾರತದಲ್ಲಿನ ಸಾಗರ ಸಂಶೋಧನೆಯ ಬಗ್ಗೆ ವಿವರಿಸಿ ಮೆಚ್ಚುಗೆ ಪಡೆದರು. ನಂತರ ಪ್ರವಾಸಿ ಪ್ರಶಂಶಾ ಪುಸ್ತಕದಲ್ಲಿ ತಮ್ಮ ಅಂಕಿತವನ್ನು   ಸವಿ ಸಂಕೇತ ನೆನಪಾಗಿರಿಸಿ ಮುಂದೆ ಪ್ರಯಾಣಮಾಡಿದರು.

ಅಂಟಾರ್ಕ್ಟಿಕ್  ವೃತ್ತವನ್ನು(Antarctic Circle) ದಾಟಿದರು.  0, ೬೬.೫ ರೇಖಾಂಶ ಮತ್ತು ಅಕ್ಷಾಂಶ (0 degree longitude and 66.5 degree latitude).  ಆ ಘಳಿಗೆಯಲ್ಲಿ ಅವರಿಗೆ ಆದ ಸಂತೋಷವನ್ನು ಹೇಳಲು ಅಸಾಧ್ಯ! ಇಲ್ಲಿಂದ ಅವರುಗಳ ಪ್ರಯಾಣ ಉತ್ತರಾಭಿಮುಖವಾಗಿ ಮುಂದುವರಿಯಿತು.

ಅವರ ಮುಂದೆ ಪ್ರಯಾಣ ಡ್ರೇಕ್ ಎಂಬ ಜಲಪಥ (Drake's Passage).

ಈ ಪ್ರದೇಶ ಅಟ್ಲಾಂಟಿಕ್ ಮತ್ತು ಪೆಸಿಫ಼ಿಕ್ ಮಾಹಾಸಾಗರಗಳ (SouthernOcean) ಅಸಾಧ್ಯವಾದ ಉಬ್ಬರವಿಳಿತಗಳ ಸಂಗಮ ಪ್ರದೇಶ.

ಈ ಪ್ರದೇಶದಲ್ಲಿ ಅವರು ಮೂವತ್ತು ಅಡಿಗಳಿಗೂ  ಬಹಳ ಮೀರಿ ಅಪ್ಪಳಿಸುವ ಅಲೆಗಳೂ ಮತ್ತು ತೀವ್ರ ಬಿರುಗಾಳಿಯ ಪ್ರಭಾವನ್ನು ಸಹಿಸಬೇಕಾಗಿ  ಬಂದಿತು.

ನಂತರಮುಂದೆ ಹೋದಂತೆ ಹವಮಾನ ಶಾಂತವಾಗಿತ್ತು, ಪರಿಸರದ ಸೌಂದರ್ಯವೂ ಆಹ್ಲಾದಕರವಾಗಿದ್ದಿತು.ಆ ಮಹಾಸಮುದ್ರದಲ್ಲಿ ಅನೇಕವರ್ಗದ ತಿಮಿಂಗಳಗನ್ನು ( killer whales),ಭಾರೀತೂಕಗಳ ಮೊಸಳೆಗಳು (crocodiles) ಮೊದಲಾದ ಭಾರಿ ಪ್ರಾಣಿಗಳನ್ನು ಬಹಳ ಸಮೀಪದಿಂದಲೇ ನೋಡುವ  ಭಾಗ್ಯಸಂದಿತು.

ಈ ಪ್ರಕಾರ ತಮ್ಮ ಅಂಕಿತವನ್ನುಅಂಟಾರ್ಟಿಕದಲ್ಲಿ ನೆಲೆಗೊಳಿಸಿ ಭಾರತೀಯರಾದ ಬೆಂಗಳೂರಿನ ಶಶಿಧರ ದಂಪತಿಗಳು ಸವಿನೆನಪುಗಳನ್ನು ಕೊಂಡುಬಂದಿದ್ದಾರೆ.

# ಆರೋಗ್ಯ

ಗ್ರೀಷ್ಮ ಗಾಯನ



# ಆರೋಗ್ಯ ಹೆಚ್ಚಿಸುವ ಓದು

**ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ**

ಪುಸ್ತಕಗಳು ನಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ವ್ಯಕ್ತಿಗಳು ಮತ್ತು ಇತಿಹಾಸಗಳ ಬಗ್ಗೆ ವೈಯಕ್ತಿಕವಾಗಿ ಮತ್ತು ಆಳವಾದ ರೀತಿಯಲ್ಲಿ ಕಲಿಯಲು ಮತ್ತು ನಮಗೆ ಹೆಚ್ಚು ಅಗತ್ಯವಿರುವಾಗ ಲೌಕಿಕ ಜೀವನದಿಂದ ಸ್ವಲ್ಪ ಹೊತ್ತು ದೂರ ಉಳಿಯಲು ಸಹಾಯ ನೀಡುತ್ತವೆ. ಅದಲ್ಲದೆ ಮನಸ್ಸಿಗೆ ಮುದ ನೀಡುತ್ತವೆ. ಓದುವುದು ಕೇವಲ ಹವ್ಯಾಸ ಅಥವಾ ಆನಂದದಾಯಕವಾಗಿರಲೇ ಅಲ್ಲ. ಓದು ನಮ್ಮ ಮೆದುಳಿಗೆ ದೀರ್ಘಾವಧಿಯ ಪ್ರಯೋಜನಗಳನ್ನು ಒದಗಿಸುತ್ತದೆ. ಜೀವನದ ಪ್ರತಿಯೊಂದು ಹಂತದಲ್ಲೂ ಓದುವುದು ನಿಮ್ಮ ಆರೋಗ್ಯಕ್ಕೆ ಏಕೆ ಮತ್ತು ಹೇಗೆ ಒಳ್ಳೆಯದು ಎಂಬುದರ ಕುರಿತು ನಾವು ಕೆಲವು ಸಂಶೋಧಿತ ಕಾರಣಗಳಿವೆ.

**ಬಾಲ್ಯದಲ್ಲಿ**

ಓದುವ ಮಕ್ಕಳು ಅಮೂರ್ತ ಪರಿಕಲ್ಪನೆಗಳನ್ನು ಗ್ರಹಿಸಲು, ವಿವಿಧ ಸನ್ನಿವೇಶಗಳಲ್ಲಿ ತರ್ಕವನ್ನು ಅನ್ವಯಿಸಲು, ಕಾರಣ ಮತ್ತು ಪರಿಣಾಮವನ್ನು ಗುರುತಿಸಲು ಮತ್ತು ಉತ್ತಮ ತೀರ್ಮಾನವನ್ನು ಬಳಸಿಕೊಳ್ಳಲು ಸಮರ್ಥರಾಗಿರುತ್ತಾರೆ. ಮಕ್ಕಳ ಪುಸ್ತಕವು ದೂರದರ್ಶನ ಕಾರ್ಯಕ್ರಮವನ್ನು ನೋಡುವುದಕ್ಕಿಂತ ಶೇಕಡ ೫೦ ಹೆಚ್ಚು ಪದಗಳನ್ನು ಮಕ್ಕಳಿಗೆ ಕಲಿಸಿಕೊಡುತ್ತದೆ. ವಿನೋದಕ್ಕಾಗಿ ಓದುವ ಹದಿಹರೆಯದವರು ತಮ್ಮ ವೃತ್ತಿಜೀವನದ ಗುರಿಗಳನ್ನು ಸ್ಪಷ್ಟಪಡಿಸಲು ಮತ್ತು ಅಪಾಯಕಾರಿ ನಡವಳಿಕೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

**ಪ್ರೌಢಾವಸ್ಥೆಯಲ್ಲಿ**

ಅಮೆರಿಕಾದ ವಿಶ್ವವಿದ್ಯಾನಿಲಯವೊಂದು ನಡೆಸಿದ ಅಧ್ಯಯನದಲ್ಲಿ, ತಮ್ಮ ಹೃದಯ ಬಡಿತವನ್ನು ನಿಧಾನಗೊಳಿಸಲು ಮತ್ತು ಸ್ನಾಯುಗಳಲ್ಲಿನ ಒತ್ತಡವನ್ನು ಕಡಿಮೆ ಮಾಡಲು ಆರು ನಿಮಿಷಗಳ ಕಾಲ ಮೌನವಾಗಿ ಓದಬೇಕು ಎಂದು ಕಂಡುಬಂದಿದೆ. ನರಗಳನ್ನು ಶಾಂತಗೊಳಿಸಲು ಇತರ ವಿಧಾನಗಳಿಗಿಂತ ಓದುವಿಕೆಯು ಉತ್ತಮವಾಗಿ ಮತ್ತು ವೇಗವಾಗಿ ಕಾರ್ಯನಿರ್ವಹಿಸುತ್ತದೆ. ಪುಸ್ತಕಗಳು ಸಹಾನುಭೂತಿ, ಸಾಮಾಜಿಕ ಗ್ರಹಿಕೆ ಮತ್ತು ಭಾವನಾತ್ಮಕ ಬುದ್ಧಿವಂತಿಕೆಯನ್ನು ಉತ್ತೇಜಿಸುತ್ತವೆ.

**ಇಳಿ ವಯಸ್ಸಿನಲ್ಲಿ**

ಅಮೆರಿಕಾದ ಯೇಲ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಪುಸ್ತಕ ಓದುವಿಕೆ ಆಯುಸ್ಸನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಕಂಡುಕೊಂಡಿದ್ದಾರೆ , ಇದು ವೃತ್ತಪತ್ರಿಕೆಗಳು ಅಥವಾ ನಿಯತಕಾಲಿಕೆಗಳನ್ನು ಓದುವುದಕ್ಕಿಂತ ಗಮನಾರ್ಹವಾಗಿ ಹೆಚ್ಚು. ಓದುವಂತಹ ಮಾನಸಿಕ ಸವಾಲಿನ ಕೆಲಸಗಳು, ಮೆದುಳಿನ ಕೋಶಗಳನ್ನು ಮತ್ತು ಮೆದುಳಿನ ಕೋಶಗಳ ನಡುವಿನ ಸಂಪರ್ಕಗಳನ್ನು ನಿರ್ವಹಿಸಲು ಮತ್ತು ನಿರ್ಮಿಸಲು ಸಹಾಯ ಮಾಡುತ್ತದೆ. ಪುಸ್ತಕಗಳನ್ನು ಓದದವರಿಗೆ ಹೋಲಿಸಿದರೆ, ಪುಸ್ತಕಗಳನ್ನು ಓದುವವರ ಮರಣ ಪ್ರಮಾಣ ಶೇಕಡ ೨೦ ಕಡಿಮೆ ಎಂದು ಗಮನಿಸಲಾಗಿದೆ.

ಮುಂದಿನ ಬಾರಿ ನೀವು ಪುಸ್ತಕದಲ್ಲಿ ನಿಮ್ಮನ್ನು ಕಳೆದುಕೊಳ್ಳುತ್ತೀರಿ ಎಂದಾದರೆ , ನಿಮಗೆ ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ಇದೆ ಎಂದು ಅರ್ಥ. ಈಗಲೇ ಒಳ್ಳೆಯ ಪುಸ್ತಕವೊಂದನ್ನು ಕೈಗೆತ್ತಿಕೊಳ್ಳಿ.

# ಪ್ರಕೃತಿ

ಗ್ರೀಷ್ಮ ಗಾಯನ



# ಸಮ್ಮರ್ ರೆಡ್

ಹಿತೈಷಿ ಚಂದ್ರ , ನ್ಯೂಜೆರ್ಸಿ





ನ್ಯೂಜೆರ್ಸಿ


















# ಚಿನ್ನರ ಮುತ್ತುಗಳು

ಗ್ರೀಷ್ಮ ಗಾಯನ

# ಸರ್ಕಾರದ ಆಡಳಿತ ಶಾಖೆಗಳು




ಹಿತರ್ಥ್ ಚಂದ್ರ , ನ್ಯೂಜೆರ್ಸಿ





# ತಾಯಂದಿರ ದಿನ

**ದಿಯಾ ರಜನೀಶ**, ನ್ಯೂಜೆರ್ಸಿ





# ಚಿತ್ರ ಕಲೆ

**ಹಿತರ್ಥ್ ಚಂದ್ರ , ನ್ಯೂಜೆರ್ಸಿ**




ಉಪ್ಪಿಗಿಂತ ರುಚಿಯಿಲ್ಲ
ತಾಯಿಗಿಂತ ಬಂಧುವಿಲ್ಲ
ಅಮ್ಮಂದಿರ
ದಿನದ
ಶುಭಾಶಯಗಳು
ನಿಮ್ಮ ಅಪೂರ್ವ
ತಂಡದಿಂದ
AB


Sunday, June 18 - 11:00AM
ಬೃಂದಾವನ ವನವಿಹಾರ
Donaldson Park,
Highland Park, NJ
Financial Education Workshops
JYOTI SHIRAHATTI
Licensed Financial Consultant
SR Finance
SECURE YOUR FUTURE
SERVICES
For more info
630-649-8190
Retirement Planning
Long Term Care
Life Insurance
Investment Planning
College Planning
Wills & Trust
Medicare Supplements
Business Opportunity
Disability Insurance
Social Security Optimization
tinyurl.com/2nymf9fk | srfinanceeducation@gmail.com
AB
Perth Amboy
Pediatric Dentistry & Orthodontics
Most Major Insurances &
New Jersey Medicaid Accepted
Tel : 732-884-5455







# ಚಿಣ್ಣರಿಗಾಗಿ
# ಪುಸ್ತಕ ಅಭಿಯಾನ

**Please help by donating gently used books ( fiction, non fiction) from preschool to 12th grade in any languages.**

## *Drop Off Locations*

**NORTH : 62 Leahy Drive, Wood Ridge 07075**

**CENTRAL NORTH : 17 Woodruff Road, Edison 08820**

**CENTRAL : 21 Woodmere Road , North Brunswick 08902**

**SOUTH : 11 Thoreau Court East Windsor 08520**

**Donate by June 16th, 2023**



For enquiry contact : brindavana.suddhi@gmail.com / 609-619-0988

AP @RohiniMahesh www.brindavana.org RM

# ಧನ್ಯವಾದಗಳು

ಗ್ರೀಷ್ಮ ಗಾಯನ